ಸಂಬಂಧಪಟ್ಟಂತೆ ಸೇವಾ ನಿಯಮ ಮಾಡಿ ಇವರನ್ನೂ ಸಹ ಸರ್ಕಾರೀ ನೌಕರರೆಂದು ಪರಿಗಣನೆ ಮಾಡಿದ್ದೇವೆ. ಇದು ಬಹಳ ಮುಖ್ಯವಾದುದು.

SRI D DEVARAJ URS.—The points cannot be reconciled totally. When once you say that he is considered as a Government servant that means he has to be paid the Government servant's scale.

MR. SPEAKER.—Only in respect of service conditions.

SRI D. DEVARAJ URS.—Yes. Service conditions pay scale is also one of them. That is the anamoly.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೇ, ಈಗ ಈ ಕೋ ಆಪರೇಟಿವ್ ನೌಕರರಿಗೆ ಸಂಬಂಧಪಟ್ಟಂತೆ ಬೇರೆ ಸೇವಾ ನಿಯಮ ಮಾಡಿದ್ದೇವೆ. ಮತ್ತು ಇವರನ್ನು ಸರ್ಕಾರೀ ನೌಕರರೆಂದು ಪರಿಗಣನೆ ಮಾಡಿದ್ದೇವೆ. ಇದಕ್ಕೂ ಮೊದಲು ಇದನ್ನೂ ಸಹ ಮಾಡಿರಲಿಲ್ಲ. ಇವರನ್ನು ಯಾರು ಕೇಳುತ್ತಿದ್ದರು ? ಯಾರು ಬೇಕಾದರೂ ಇವರನ್ನು ಓಡಿಸಬಹುದಾಗಿತ್ತು. ಈಗ ಅದನ್ನು ತಪ್ಪಿಸಿದ್ದೇವೆ. ಜೊತೆಗೆ ಸಂಬಳ ಸ್ವಲ್ಪ ಜಾಸ್ತಿ ಮಾಡಿದ್ದೇವೆ. ಇದರ ಜೊತೆಗೆ ಡಿ. ಎ. ಕೂಡ ೫೫ ಪರ್ಸೆಂಟ್ ಕೊಟ್ಟಿದ್ದೇವೆ. ಸರ್ಕಾರೀ ನೌಕರರಿಗೆ ಕೊಡುವ ರೀತಿಯಲ್ಲಿಯೇ ಡಿ. ಎ. ಕೊಡಿ ಎಂದು ಕೇಳಿದ್ದಾರೆ. ಇದನ್ನೂ ಸಹ ಪರಿಗಣನೆ ಮಾಡುವ ಪರಿಸ್ಥಿತಿ ಬಂದಿದೆ ಇದಕ್ಕೂ ಮೊದಲು ಇವರು ಅಲ್ಲಿ ಚೆನ್ನಾಗಿ ಕೆಲಸ ಮಾಡಿ, ಒಳ್ಳೆಯ ಲಾಭ ಸಂಪಾದನೆ ಮಾಡಿದರೆ ಆದರೆ

ಶ್ರೀ ಡಿ. ದೇವರಾಜ ಅರಸ್.—ಈ ವಿಚಾರದಲ್ಲಿ ತಾವು ಮಾನ್ಯ ಸಾನಯ್ಯನವರು ಹೇಳಿದ್ದನ್ನು ಒಪ್ಪಿಕೊಳ್ಳಬಹುದು.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅವರ ಸಲಹೆ ಬಹಳ ಚೆನ್ನಾಗಿದೆ.

ಶ್ರೀ ಡಿ. ದೇವರಾಜ ಅರಸ್.—ಪಂಚಾಯಿತಿ ವಟ್ಟಿದಲ್ಲಿ ಒಂದೊಂದು ಸೊಸೈಟಿ ಸ್ಥಾಪನೆ ಮಾಡುವ ವಿಚಾರದಲ್ಲಿ ಹಾಗೂ ಅಲ್ಲಿ ಕೆಲಸ ಮಾಡುವ ನೌಕರರಿಗೆ ಎಲ್ಲ ಸೌಲಭ್ಯಗಳನ್ನು ಒದಗಿಸಿ ಕೊಡುವ ವಿಚಾರದಲ್ಲಿ ಪರಿಶೀಲನೆ ಮಾಡಿ ಒಂದು ವರದಿ ಕೊಡಲು ಸಮಿತಿಯೊಂದನ್ನು ನೇಮಕ ಮಾಡುವುದು ಒಳ್ಳೆಯದಲ್ಲವೇ ?

ಅಧ್ಯಕ್ಷರೇ.—೩ ವರ್ಷಕ್ಕೆ ಒಂದು ಸಲ ರಿವ್ಯೂ ಮಾಡಲಾಗುತ್ತದೆಂದು ಹೇಳಿದ್ದಾರೆ.

SRI D. DEVERAJ URS.—That is what I am suggesting Let them review. It is alright.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಬಹುತೇಕ ಸದಸ್ಯರಿಗೆ ಅಲ್ಲಿನ ವ್ಯವಹಾರಗಳೆಲ್ಲಾ ಗೊತ್ತಿದೆ. ಅದರಂತೆ ಎಲ್ಲರೂ ತಮ್ಮ ಒಂದು ಅನುಭವವನ್ನು ತಿಳಿಸಿದ್ದಾರೆ. ಮುಂದೆ ಇದನ್ನೆಲ್ಲಾ ಮಾಡುವಾಗ, ಮಾನ್ಯ ಸದಸ್ಯರು ಹೇಳಿದ್ದನ್ನೆಲ್ಲಾ ಕನ್ಸಿಡರೇಷನ್‌ನಲ್ಲಿಟ್ಟುಕೊಂಡು ಮಾಡಬಹುದು.

ಅಧ್ಯಕ್ಷರು. ಇಲ್ಲಿಗೆ ಈ ವಿಷಯ ಮುಕ್ತಾಯವಾಯಿತು.

ವಿಷಯ. — (ಅ) ೧೬-೩-೧೯೭೧ರಂದು ಬೆಳಿಗ್ಗೆ ೯ ಗಂಟೆಯಲ್ಲಿ ಕಾಂಗ್ರೆಸ್ (ಐ) ಕಛೇರಿಯ ಮೇಲೆ ಕಾಂಗ್ರೆಸ್ (ಐ) ಯುವಕರು ಧಾಳಿಮಾಡಿದ ವಿಷಯದ ಬಗ್ಗೆ.

ಶ್ರೀ ಜೆ.ಎಚ್. ಪಟೇಲ್ —ಸನ್ಮಾನ್ಯ ಅಧ್ಯಕ್ಷರೇ, ನಾನು ಮುಖ್ಯ ಮಂತ್ರಿಗಳ ಗಮನವನ್ನು ತಾರೀಖು ೧೬-೩-೧೯೭೧ರಂದು ಬೆಳಿಗ್ಗೆ ೯ ಗಂಟೆಯಲ್ಲಿ ಕಾಂಗ್ರೆಸ್ (ಐ) ಕಛೇರಿ ಮೇಲೆ ಕಾಂಗ್ರೆಸ್ (ಐ) ಯುವಕರು ಧಾಳಿ ಮಾಡಿದ ವಿಷಯದ ಬಗ್ಗೆ ಸೆಳೆಯುತ್ತೇನೆ ಮತ್ತು ಅವರು ಈ ಬಗ್ಗೆ ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

SRI R. GUNDU RAO (Chief Minister).—Sir, in Government Order No. AF 336 AHM 72 dated 8th December, 1972 the Government have accorded sanction to lease out an area of 250' X 150' in the open

ground at Subhashnagar. Bangalore to Shri Master Hirannaiah, Proprietor, M/s. Hirannaiah Mitra Mandali, Mysore Theatrical Company to construct a permanent drama theatre, subject to the condition that the Mandali should put up a permanent theatre within a period of five years. Since the Mandali did not take action to put up the permanent theatre within the period of five years, Government had terminated the lease vide Government Order No. CI 97 SPM 79 (1), dated the 8th January, 1980. On the same day, the Government also issued another order leasing out 1 acre 25 guntas of land in the same area to M/s. Sree Chamundeswari Trust (R), Bangalore for a period of 50 years on a monthly ground rent of Rs. 600.

Subsequently, the Government reviewed the whole matter and came to the conclusion that the purpose for which the lease was granted in favour of M/s. Sree Chamundeswari Trust was not for public purpose. They have, therefore, cancelled the lease and revoked the Government order issued on 8-1-1980. Both the parties viz., M/s. Hirannaiah Mitra Mandali and M/s. Sree Chamundeswari Trust have filed Writ Petitions in the High Court of Karnataka and have obtained Stay Order. The matter is thus pending in the High Court for a decision.

In the meanwhile, it is reported that MICO Employees Association were holding their General body Meeting on 16-3-1981 in the same area. During the course of the meeting, there were some disturbances. The Police arrived in time to prevent any breach of peace there This time, a group calling themselves Congress-(I) claimed that the area belonged to them. As there was further likelihood of breach of peace the police dispersed them also. As there is likelihood of further breach of peace, and it is not possible for the Police to determine who is actually in possession, the Police have moved the Sub-Divisional Magistrate. Bangalore Sub-Division under section 145 Cr. P.C. in accordance with the Law.

A case and countercase have been registered on the complaints received from the rival groups.

And further two cases have been registered on the complaints on some representatives of Congress (I) and Congress (U). Both the cases are under Section 447 IPC read with Section 34 IPC at Upparpet Police Station. On a report of the Sub-Inspector of Police, Upparpet, the Sub-Divisional Magistrate, Bangalore has passed order on 16-3-1981 under Section 145 (1) and 146 of Cr.P.C. attaching the property to prevent any breach of peace and has appointed the Tahsildar, Bangalore North Taluk as receiver. The Tahsildar is now engaged in the process of attaching the above property.

† ಶ್ರೀ ಜೆ.ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಇದು ಗವರ್ನಮೆಂಟ್ ಸೆಳೆಯುವ ಪ್ರಸ್ತಾವ ಆಗಿರುವುದರಿಂದ ನಾನಂ ಇದರ ಬಗ್ಗೆ ಡಿಬೇಟ್ ಮಾಡುವುದಕ್ಕಾಗುವುದಿಲ್ಲ. ಆದರೂ ತಮ್ಮ ಅನುಮತಿಯನ್ನು ಪಡೆದು ಕೆಲವು ವಿಷಯಗಳನ್ನು ಹೇಳುತ್ತಿದ್ದೇನೆ. ನಾನು ಈ ಸದನಕ್ಕೆ ಬರುವುದಕ್ಕೆ ಮುಂಚೆ ಆ ಸ್ಥಳಕ್ಕೆ ಹೋಗಿ ಬಂದೆ. ಇವತ್ತು ಏನು ಪರಿಸ್ಥಿತಿ ಇದೆ ಅದರ ಬಗ್ಗೆ ನಾನು ಆ ನಂತರ ಹೇಳುತ್ತೇನೆ. ಆದರೆ ನಿನ್ನೆ ಆಗಿರುವುದನ್ನು ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆ ಪ್ರಕಾರ ಅದು ಚಾಮುಂಡೇಶ್ವರಿ ಟ್ರಸ್ಟ್ ನವರಿಗೆ ಸೇರಿದ ಪ್ರಾಪರ್ಟಿ, ಡಿಸ್ಪ್ಯೂಟ್ ಇರಬಹುದು, ಗವರ್ನಮೆಂಟ್ ಆರ್ಡರ್ ರಿವೋಕ್ ಆಗಿರಬಹುದು, ರಿವೋಕೇಷನ್ ಚಾಲೆಂಜ್ ಮಾಡಿ ಸ್ಟೇ ಆರ್ಡರ್ ತೆಗೆದುಕೊಂಡಿದ್ದಾರೆ, ಚಾಮುಂಡೇಶ್ವರಿ ಟ್ರಸ್ಟ್‌ನವರ ಪೊಸಿಷನ್‌ನಲ್ಲಿದೆ. ಇಷ್ಟು ಸರ್ಕಾರಕ್ಕೆ ಗೊತ್ತಿದ್ದು, ನಿನ್ನೆ ಅಲ್ಲಿ ಮೈಕೊನಲ್ಲಿ ಎರಡು ಭಾಗಗಳಾಗಿರತಕ್ಕ ಜನ ಸೇರಿ ಜಗಳ ಆಡುತ್ತಿದ್ದರು ಎನ್ನುವ ಕಾರಣಕ್ಕಾಗಿ, ಕಾಂಗ್ರೆಸ್–ಐ ಎಂಬ ದೊಡ್ಡ ಬೋರ್ಡನ್ನು ಬರೆಸಿಕೊಂಡು ಬಂದು ಕಾಂಗ್ರೆಸ್–ಯ ಆಫೀಸಿನ ಬೋರ್ಡನ್ನು ಕಿತ್ತು ಅದಕ್ಕೆ ಹಚ್ಚಿ ಒಳಗಡೆ ನುಗ್ಗಿ ಕೆಲಸ ಮಾಡುತ್ತಾ ಇದ್ದಂಥ ರಾಮದಾಸಪ್ಪ ಎಂಬ ಆಫೀಸ್ ಸೆಕ್ರೆಟರಿಯನ್ನು ಹೊರಗೆ ಎಳೆದು ಕೈಯಲ್ಲಿ ಸಾಕಷ್ಟು ಮಚ್ಚು ಮುಂತಾದ ಮಾರಕ ಅಸ್ತ್ರಗಳನ್ನು ಹಿಡಿದುಕೊಂಡು ಬಂದು ಗಲಾಟೆ ಮಾಡಿ ಇದು ನಮಗೆ ಸೇರಿದ ಆಫೀಸು ಎಂದು ಕ್ಲೇಮು ಮಾಡತಕ್ಕಂಥ ವಿಧಾನ ಏನಿದೆ ಇದು ಇತಿಹಾಸದ ಒಂದು ಹೊಸ ವಿಧಾನ. ಹಿಂದೆ ಮಾಡಿದೆವು ಎಂದು ಹೇಳಿದರೆ, ಹಿಂದೆ ಮಾಡಿದಾಗ ಯಾರಿದ್ದರು.

ಶ್ರೀ ಮಳ್ಳೂರು ಆನಂದರಾವ್.—ಕಾಂಗ್ರೆಸ್‌ಗೆ ಇದು ಹಳೆಯುದು.

ಶ್ರೀ ಜೆ.ಹೆಚ್. ಪಟೇಲ್.—ಕೆಲವರು ನನ್ನ ಮನೆಯಲ್ಲಿ ನುಗ್ಗಿ, ಇದು ನಮ್ಮ ಮನೆಯೋ, ನಿಮ್ಮ ಮನೆಯೋ ನಂತರ ತೀರ್ಮಾನವಾಗಲಿ, ಈಗ ಬೀಗ ಹಾಕೋಣ ಅಂದರೆ ಇದು ಒಂದು ನಾಗರೀಕ ಸಮಾಜದ ಲಕ್ಷಣವೇ. ಸ್ಪಷ್ಟ: ಸರ್ಕಾರ ನಡೆಸತಕ್ಕವರ ಹೆಸರಿನಲ್ಲಿ ಇಷ್ಟು ವೀರ ಸಾಹಸ ಮಾಡಿ, ಆ ಯುವಕರು ಗುಂಡೂರಾವ್ ಜಿಂದಾಬಾದ್, ಎಫ್. ಎಂ. ಖಾನ್ ಜಿಂದಾಬಾದ್ ಎಂದು ಹೇಳುತ್ತಾ ಕೈಯಲ್ಲಿ ಅಸ್ತ್ರಗಳನ್ನು ಹಿಡಿದುಕೊಂಡು ಪೋಲೀಸ್ ಎಸ್ಕಾರ್ಟ್‌ನಲ್ಲಿ ರಸ್ತೆಯಲ್ಲಿ ಹೋಗುತ್ತಿರಬೇಕಾದರೆ ಇದನ್ನು ನೇರವಾಗಿ ಮಾನ್ಯ ಮುಖ್ಯ ಮಂತ್ರಿಗಳೇ ಹೇಳಿ ಮಾಡಿಸಿದ್ದಾರೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ಇವರು ಗೃಹಮಂತ್ರಿಗಳಾಗಿರುವಾಗ ಇವರ ಹೆಸರಿನಲ್ಲಿ ಇಂಥಾ ಒಂದು ಗೂಂಡಾಯಿಸಂ, ಈ ರೀತಿ ದರೋಡೆಕೋರತನ ನಡೆಯುವುದಾದರೆ ಹೇಗೆ ಸಾರ್ವಜನಿಕರ ರಕ್ಷಣೆಯಾಗುತ್ತದೆ. ಕನ್ನಡ ಪ್ರಭಾದಲ್ಲಿ ಹೀಗೆ ಇದೆ. 'ಕೈಕಟ್ಟಿನಿಂತ ಪೋಲೀಸರ ಎದುರೇ ಆರಸು ಕಾಂಗ್ರೆಸ್ ಪಕ್ಷದ ಕಛೇರಿ ಮೇಲೆ ಯುವ ಕಾಂಗ್ರೆಸ ದಿಢೀರ್ ಧಾಳಿ'' ಎಂದು ಇದೆ. ಆದರ ಪಕ್ಕದಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಫೋಟೋ ಇದೆ. ಶ್ರವಣಬೆಳಗೊಳದ ಸಮಾರಂಭವನ್ನ ವರದಿ ಮಾಡಿದ್ದಾರೆ. ಅಲ್ಲಿ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ''ಶಾಂತಿ ಅಹಿಂಸೆ, ಧರ್ಮವನ್ನು ಸಾರುವ ವಿಶ್ವಕೇಂದ್ರ ನ್ನಾಗಿ ಶ್ರವಣಬೆಳಗೊಳವನ್ನು ಮಾಡಬೇಕೆಂಬ ನಿರ್ಧಾರವನ್ನು ಸರ್ಕಾರ ಮಾಡಿದೆ ಎಂದು ಹೇಳಿದ್ದಾರೆ. ಶ್ರವಣಬೆಳಗೊಳದಲ್ಲಿ ಶಾಂತಿಸ್ಥಾಪನೆ, ಇಲ್ಲಿ ಸಂಭಾಷ್‌ನಗರದಲ್ಲಿ ಧಾಳಿ.

ಅಧ್ಯಕ್ಷರು.—ಪತ್ರಿಕೆಯಲ್ಲಿ ಬೇರೆ ಬೇರೆ ವಿಷಯಗಳನ್ನು ವರದಿ ಮಾಡಿರಬಹುದು. ನೀವೇಕೆ ಜೋಡಿಸುವುದಕ್ಕೆ ಹೋಗುತ್ತೀರಿ.

ಶ್ರೀ ವೈ. ರಾಮಕೃಷ್ಣ.—ಅದು ರಾಜಕೀಯ.

ಶ್ರೀ ಜೆ.ಹೆಚ್. ಪಟೇಲ್.—ನಾನು ಅವರ ಈ ಮುಖವನ್ನು ನೋಡುವುದಕ್ಕೆ ಇಷ್ಟಪಡುವುದಿಲ್ಲ. ನಿಜವಾಗಿಯೂ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಯಾಗಿ, ಅದಕ್ಕೆ ತಕ್ಕುದಾದ ಮಾತನ್ನು ಶ್ರವಣ ಬೆಳಗೊಳದಲ್ಲಿ ಹೇಳಿದ್ದಾರೆ. I want him to live upto that standard and live upto such ideals. ಅದನ್ನು ಬಿಟ್ಟು, ನನಗೆ ಗೊತ್ತಿರುವಹಾಗೆ, ಕಾಂಗ್ರೆಸ್ ಆಫೀಸಿಗೆ ನಾನು ಎಂದೆಂದಿಗೂ ಹೋದವನಲ್ಲ. ಒಂದು ದಿವಸ ನೋಡಿಕೊಂಡು ಬಂದಿದ್ದೆ. ಆರಸು ಕಾಂಗ್ರೆಸ್ ಆಫೀಸನ್ನು ನೋಡಿಕೊಂಡು ಬಂದಿದ್ದೆ, ಕಾಂಗ್ರೆಸ್–ಐಗೆ ಬಂದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳ ಸ್ಟೇಟ್‌ಮೆಂಟ್‌ನಲ್ಲಿರುವಂತೆ ಹೈಕೋರ್ಟಿನಲ್ಲಿ ಸ್ಟೇ ಆರ್ಡರ್ ತೆಗೆದುಕೊಂಡಿದ್ದಾರೆ. ಲೀಗಲ್ ಪೊಜಿಷನ್ ಏನಿದೆ. ಮೈಕೊನವರು ಗಲಾಟೆ ಮಾಡಿದ್ದಾರೆ, ಅವಕ್ಕೊಸ್ಕರ ಮಾಡಿದ್ದಾರೆ ಅಂದರೆ ಅದು ಬೇರೆ. ಬ್ಯಾನರ್ ಹಚ್ಚಿ, ಬೋರ್ಡ್ ಕಿತ್ತು ಒಳಗೆ ಕೆಲಸವಾಡುತ್ತಿದ್ದ.....

ಶ್ರೀ ಮಳ್ಳೂರು ಆನಂದರಾವ್.—ಪಾಯಿಂಟ್ ಆಫ್ ಆರ್ಡರ್.

ಶ್ರೀ ಜೆ.ಹೆಚ್. ಪಟೇಲ್.—ಅವರಿಗೆ ಪಾಯಿಂಟೂ ಇಲ್ಲ, ಆರ್ಡರೂ ಇಲ್ಲ, ನನಗೆ ಗೊತ್ತಿದೆ.

ಶ್ರೀ ಮಳ್ಳೂರು ಆನಂದರಾವ್.—ನಮ್ಮಿಬ್ಬರಿಗೂ ಗೊತ್ತು. ನನ್ನಲ್ಲಿ ಪಾಯಿಂಟ್ ಇದೆ, ಆರ್ಡರೂ ಇದೆ. ನಿಮ್ಮ ಪಾಯಿಂಟ್ ಆರ್ಡರು ಎಲ್ಲಿದೆ. ಇದು ಕಾಲಿಂಗ್ ಅಟೆನ್ಷನ್. ಇದರ ಬಗ್ಗೆ ಮೊನ್ನೆತಾನೆ ತಾವೇ ರೂಲಿಂಗ್ ಕೊಡಿಸಿದ್ದೀರಿ. ಸ್ಟೈಕ್ ವಿಷಯ ಬಂದಾಗ ಇದರಲ್ಲಿ ಭಾಷಣ ಮಾಡಲಿಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಮಳ್ಳೂರು ಆನಂದರಾವ್.—ನಾನು ಹೇಳುವುದನ್ನು ಕೇಳಿ. ತಾವು ಅಪ್ಪಣೆ ಕೊಡಿಸಿದ್ದೀರಿ. ಇದರಲ್ಲಿ ಭಾಷಣ ಮಾಡಲಿಕ್ಕೆ ಅವಕಾಶ ಕೊಡುವುದಿಲ್ಲ, ಒಂದೆರಡು ಕ್ಲಾರಿಫಿಕೇಷನ್ ಕೇಳಬಹುದು ಎಂದು ಹೇಳಿದ್ದೀರಿ. ಆದರೆ ವಿಷಯ ಗಂಭೀರವಾಗಿರುವುದರಿಂದ ಮಾನ್ಯ ಪಟೇಲರಿಗೆ ಮುಕ್ತ ಅವಕಾಶ ಕೊಡಬೇಕು. ಇದರಲ್ಲಿ ಪಾರ್ಟಿ ಇನ್‌ವಾಲ್ವ್ ಆಗಿರುವುದರಿಂದ, ಈ ಇಷ್ಯೂ ಕೇವಲ ಕಾಲಿಂಗ್ ಅಟೆನ್ಷನ್‌ನಲ್ಲಿ ಕ್ಲಾರಿಫಿಕೇಷನ್ ಕೇಳುವುದಕ್ಕೆ ಮಾತ್ರ ಸೀಮಿತವಾಗಿರತಕ್ಕಂಥಾದ್ದು. ಭಾಷಣ ಮಾಡಲಿಕ್ಕೆ ಅವಕಾಶಕೊಟ್ಟರೆ ನಮ್ಮ ಕಡೆ ಮುಕ್ತ ಚರ್ಚೆಗೆ ಅವಕಾಶಕೊಡಬೇಕು. ಅವಕಾಶ ಕೊಡವೇಹೋದರೆ ಕೇವಲ ಕ್ಲಾರಿಫಿಕೇಷನ್ ಕೇಳುವುದಕ್ಕೆ ಮಾತ್ರ ಅವರಿಗೆ ಅವಕಾಶ ಮಾಡಿಕೊಡಬೇಕು.

MR. SPEAKER.—The Hon. Deputy Leader of Opposition took my permission.

SRI S.M. SHEERNALY CHANDRASHEKAR.—Sir, I am on a point of order. Rule No. 63 of the Rules of Procedure and Conduct of business in the Assembly is clear that a Member may with the permission of the Speaker.

MR. SPEAKER.—I have read that.

SRI S.M. SHEERNALY CHANDRASHEKAR.—But the practice is some thing different. They make all statements and it is being allowed.

ಶ್ರೀ ಜೆ.ಹೆಚ್. ಪಟೇಲ್.—ಹೆಚ್ಚು ಸಮಯ ತೆಗೆದುಕೊಳ್ಳುವುದಕ್ಕೆ ಇಷ್ಟಪಡುವುದಿಲ್ಲ.

SRI S.M. SHEERNALY CHANDRASHEKAR.—They have to ask only clarifications. But they make this kind of speech.

ಅಧ್ಯಕ್ಷರು.—ನಾಳೆಯಿಂದ ಈ ರೂಲ್ಸನ್ನು ಸ್ಟ್ರಿಕ್ಟಾಗಿ ನಾನು ಜಾರಿಗೆ ಕೊಟ್ಟು ಬಿಡುತ್ತೇನೆ. ಆ ರೂಲ್ ಇಡೀ ಸದನಕ್ಕೆ ಅನ್ವಯವಾಗುತ್ತದೆ. ನಾಳೆಯಿಂದ ಅದನ್ನು ಚಾಚೂ ತಪ್ಪದೆ ಜಾರಿಗೆ ತರುತ್ತೇನೆ.

SRI S.M. SHEERNALY CHANDRASHEKAR.—Why not today?

ಅಧ್ಯಕ್ಷರು.—ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡತಕ್ಕಂಥಾದ್ದು. ನೀವು ಸುಮ್ಮನೆ ಕೂತು ಕೇಳತಕ್ಕದ್ದು. ಏಷ್ಟರಮಟ್ಟಿಗೆ ನಾಳೆಯಿಂದ ರೂಲ್ಸನ್ನು ಜಾರಿಗೆ ಕೊಡುತ್ತೇನೆ, ಅದು ತಮ್ಮ ಅಭಿಪ್ರಾಯವಾಗಿದ್ದರೆ ಹಾಗೆಯೇ ಆಗಲಿ. ಅದುದರಿಂದ don't make the case worse.

SRI S.M. SHEERNALY CHANDRASHEKAR.—I would like to know whether you have suspended the rule?

MR. SPEAKER.—I have not suspended the rules.

SRI S.M. SHEERNALY CHANDRASHEKAR.—It is a political issue. I would like to participate.

MR. SPEAKER.—You have advised me enough.

SRI S.M SHEERNALY CHANDRASHEKAR.—I want your ruling.

MR. SPEAKER.—I have taken your advice I will follow that advice from tomorrow onwards.

SRI S.M. SHEERNALY CHANDRASHEKAR.— What prevents you to follow the rule from today? Why tomorrow?

ಶ್ರೀ ಜೆ.ಹೆಚ್. ಪಟೇಲ್.—ಕಾನೂನು ಪ್ರಕಾರ ನಡೆಸಬೇಕೆಂದು ಪಾಪ ಅವರು ಏನು ಹೇಳುತ್ತಿದ್ದಾರೆ ಅದು ಸರಿ, ಕಾನೂನು ಪ್ರಕಾರ ಹೇಗೆ ನಡೆಸಬೇಕೆಂದು ಗೊತ್ತಿದ್ದು ಸರಿಯಾಗಿಯೇ ನಡೆಸುತ್ತಿದ್ದಾರೆ. ಅದುದರಿಂದ ಅಧ್ಯಕ್ಷರೇ, ನಾನು ಇಷ್ಟೇ ಕೇಳುವುದಕ್ಕೆ ಇಷ್ಟ ಪಡುತ್ತೇನೆ. ಈ ರಾಜ್ಯದಲ್ಲಿ ಕಾನೂನು ಪ್ರಕಾರ ಯಾವುದೇ ಒಂದು ಆಸ್ತಿ ಒಬ್ಬ ಮನುಷ್ಯನಿಗೆ ಸೇರಿತ್ತು ಎಂದರೆ ಅವನಿಗೆ ರಕ್ಷಣೆ ಕೊಡಬೇಕಾದ್ದು ಸರ್ಕಾರದವರ ಕರ್ತವ್ಯವಾಗಿದೆ. ಇದರ ಬಗ್ಗೆ ನಿನ್ನೆಯ ದಿವಸ ಮೇಲ್ಮನೆಯಲ್ಲಿ ಎತ್ತಿದಾಗ ಸರ್ಕಾರದವರು ಇದರಲ್ಲಿ ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ತಕ್ಕ ಕ್ರಮ ತೆಗೆದುಕೊಂಡ ಶಿಕ್ಷೆ ಮಾಡುತ್ತೇವೆಂದು ಹೇಳಿದ್ದರು, ಯಾರು ಯಾರಿಗೆ ಶಿಕ್ಷೆ ಕೊಟ್ಟಿದ್ದಾರೆ? ನನಗೆ ಬೆಳಿಗ್ಗೆ ೧೧ ಗಂಟೆಗೆ ವರ್ತಮಾನ ತಿಳಿಯಿತು ೧೧½ ಗಂಟೆ ೧೧¾ ಗಂಟೆಗೆ ಆಫೀಸಿನ ಹತ್ತಿರ ಹೋದರೆ ಯೂತ್ ಕಾಂಗ್ರೆಸ್-ಐ ನವರು ಆಫೀಸಿನ ಒಳಗೆ ಕೂತು ಬಿಟ್ಟಿದ್ದರು. ನಮ್ಮ ಸ್ನೇಹಿತರು ೪-೬ ಜನ ಅಲ್ಲಿ ಕೂತಿದ್ದರು ಅಲ್ಲಿ ಎಲ್ಲಾ ಬೋರ್ಡ್‌ಗಳನ್ನು ಕಿತ್ತು ಹಾಕಿ ಬಿಟ್ಟಿದ್ದರು. ತಹಸೀಲ್ದಾರರು ಬಂದು ಎಷ್ಟು ಕುರ್ಚಿಗಳು ಇವೆ, ಎಷ್ಟು ಬೆಂಚ್‌ಗಳಿವೆಂದು ಪಟ್ಟಿ ಮಾಡುತ್ತಿದ್ದರು. ಇದು ವಿಧಾನವೇ? ಈ ಮಾರ್ಗದಲ್ಲಿ ನಾವು ಹೋಗುವುದೇ? ಇವರು ಅಧಿಕಾರಸ್ಥರ ಬೆಂಬಲವಿದೆಂದು ಅವರು ಈ ರೀತಿಯಾಗಿ ಚಾಕು, ಚೂರಿ ಹಿಡಿದುಕೊಂಡು ಇಷ್ಟು ದಾಂಧಲೆ ನಡೆಸುತ್ತಿದ್ದರೆ ಸರ್ಕಾರ ಏನಾದರೂ ಇದೆಯೋ ಎಂದು ಕೇಳಬೇಕಾಗುತ್ತದೆ. ಇದೇ ನೀವು ಸರ್ಕಾರ ನಡೆಸತಕ್ಕಂಥದ್ದು? ಎರಡನೆಯದಾಗಿ ನೀವು ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ, ಯಾರು ಇವತ್ತು ಟ್ರಸ್‌ಪಾಸ್ ಮಾಡಿದ್ದಾರೆ, ಯಾರು ಅಲ್ಲಿ ಗಲಾಟೆ ಮಾಡಿದ್ದಾರೆ ಅವರ ಮೇಲೆ ಉಪ್ಪಾರ ಪೇಟೆ ಪೋಲೀಸ್ ಸ್ಟೇಷನ್‌ನಲ್ಲಿ ದೂರು ಕೊಡಲಾಗಿದೆ, ಅವರ ಮೇಲೆ ಏನು ಕ್ರಮ ತೆಗೆದುಕೊಂಡಿಲ್ಲ. ಅವರು ಯಾರು ಯಾರೋ ಹೆಸರು ಗೊತ್ತಿಲ್ಲ. ಅವರು ಯಾರೋ ಹರಿಪ್ರಸಾದ್ ಅಂತೇ, ಜಾರ್ಜ್ ಅಂತೆ ಆಧಾರ ಸ್ತಂಭಗಳು. ಈ ಮಹಾಪುರುಷರು ಅಲ್ಲಿ ದೊಡ್ಡ ದೊಡ್ಡ ಬ್ಯಾನರ್‌ಗಳನ್ನು ಬರೆದು ಬಿಟ್ಟಿದ್ದಾರೆ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್:—ಅವರು ಯಾರೂ ಅನಾಮಧೇಯರಲ್ಲ, ಅವರು ಸಾರ್ವಜನಿಕರ ಜೀವನದಲ್ಲಿ ಉತ್ತಮವಾದ ಜೀವನವನ್ನು ನಡೆಸುತ್ತಿದ್ದಾರೆ,

ಶ್ರೀ ಜೆ.ಹೆಚ್. ಪಟೇಲ್.—ನನಗೆ ಅವರು ಯಾರು ಅಂತ ಗೊತ್ತಿಲ್ಲವಲ್ಲಾ ಅದಕ್ಕೆ ಹೇಳಿದೆ.

ಶ್ರೀ ಡಿ.ಬಿ. ರಾಮು.—ವ್ಯಂಗ ಭಾಷೆಯನ್ನು ಉಪಯೋಗಿಸಬೇಕು ಆದರೆ ಸದಾಕಾಲವಲ್ಲ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಯಾರೋ ಜಾರ್ಜ್, ಅಂತ ಹಾಗೆ ಹೀಗೆಂದು ಹೇಳುವುದು ಸರಿಯಲ್ಲ.

ಶ್ರೀ ಜೆ.ಹೆಚ್. ಪಟೇಲ್.—ಅವರು ಯಾರು ಅಂತ ನನಗೆ ಗೊತ್ತಿಲ್ಲ, ಆದುದರಿಂದ ನಾನು ಸ್ವತಃ ಇವತ್ತೇ ಅವರನ್ನು ನಾನು ನೋಡಿದ್ದು ಇವತ್ತೇ ಅವರ ಮುಖ ನೋಡಿದ್ದು. ಇಲ್ಲಿಯವರೆಗೆ ನೋಡಿರಲಿಲ್ಲ. ಇಂಥಾ ಯುವಕರು ಕಾನೂನು ಪ್ರಕಾರ ಹೋಗಲಿ, ಸತ್ಯಾಗ್ರಹ ಮಾಡುವುದನ್ನು ಕಲಿಯಲಿ, ಅವರು ನ್ಯಾಯಬೆಂಕ್ಕೋಸ್ಕರ ಹೋರಾಟ ಮಾಡುವುದನ್ನು ಕಲಿಸಿ, ಆ ರೀತಿ ಕಲಿಸದೇ ನೀವು ಚಾಕು, ಚೂರಿ ಹಿಡಿದುಕೊಂಡು ಓಡಾಡುವುದನ್ನು ಕಲಿಸುತ್ತಾ ಹೋದರೆ ಅವರು ಚಾಕು ಚೂರಿಯನ್ನು ಹಿಡಿದು ಕೊಂಡು ಊರೆಲ್ಲಾ ಸುತ್ತಾಡಿ ಕೊನೆಗೆ ನಿಮ್ಮ ಮನೆಗೇ ಬರುತ್ತಾರೆ. ಆದುದರಿಂದ ಈ ಮಾತನ್ನು ಮೊದಲೇ ಹೇಳಿರಲಿಲ್ಲವೆಂದು ತಾವು ಭಾವಿಸಬಾರದು ಅದಕ್ಕೇ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎಂ. ಮಳ್ಳೂರು ಆನಂದರಾಮ್.—ಯಾರು ಕಲಿಸಿದ್ದಾರೋ ಅವರ ಮನೆಯ ಬಾಗಿಲಿಗೇ ಬಂದಿರುವುದು. ನಿಮ್ಮ ನಾಯಕರೇ ಅವರಿಗೆ ಕಲಿಸಿರುವುದು.

ಶ್ರೀ ಜೆ.ಹೆಚ್. ಪಟೇಲ್.—ನಿಮ್ಮ ಮನೆಗೆ ಯಾರೂ ಬರುವುದಿಲ್ಲ, ನೀವು ಏತಕ್ಕೆ ಸುಮ್ಮನೇ ಮಾತನಾಡುತ್ತೀರಿ? ಆದುದರಿಂದ ಅಧ್ಯಕ್ಷರೇ ನಾನು ಕೇವಲ ೨-೩ ವಿಷಯಗಳನ್ನು ಮಾತ್ರ ಕೇಳಿ ವುದಕ್ಕೆ ಇಷ್ಟಪಡುತ್ತಿದ್ದೇನೆ. ಆ ಭೂಮಿ ಒಬ್ಬರಿಗೆ ಸೇರಿದ್ದು ಎನ್ನುವುದು ಗೊತ್ತಿದ್ದೂ ಸಹ ಅವರು ನಾವು ಕಾಂಗ್ರೆಸ್ (ಐ) ನವರು ಅಂತ ಹೇಳಿ ಬಿಟ್ಟು ಕಾಂಗ್ರೆಸ್, (ಐ), ಯುವಕರು ಹೋಗಿ ಈ ರೀತಿ ಯಾಗಿ ಗಲಾಟೆ ಮಾಡಿದ್ದರೂ ಅವರನ್ನು ಇಲ್ಲಿಯವರೆಗೆ ಏತಕ್ಕೆ ದಸ್ತಗಿರಿ ಮಾಡಿಲ್ಲ? ಏತಕ್ಕೆ ಇನ್ನು ಹೊರಗಡೆ ಬಿಟ್ಟಿದ್ದೀರಿ? ಮತ್ತೆ ಇವತ್ತು ಅಲ್ಲಿ ಸೆಕ್ಷನ್ ೧೪೪ ಇಶ್ಯು ಮಾಡಿದ್ದಾರೆ, ಆ ಸ್ಥಳದ ಬಗ್ಗೆ ಕೋರ್ಟಿಗೆ ಹೋಗುತ್ತೇವೆ ಅಲ್ಲಿ ತೀರ್ಮಾನ ಮಾಡಿಕೊಳ್ಳುತ್ತೇವೆ ಆ ಮಾತು ಬೇರೆ ಆದರ ಬಗ್ಗೆ ಡಿಸ್ಕಸ್ ಮಾಡುವ ಹಾಗಿಲ್ಲ ಸಬ್‌ಜ್ಯುಡೀಸ್ ಆಗುತ್ತದೆ. ನಿನ್ನೆಯ ದಿವಸ ರಾಮದಾಸಪ್ಪ ಎನ್ನುವವರಿಗೆ ಏನಂ ಹೊಡೆದಿದ್ದಾರೆ ಅವರು ಆದರ ಬಗ್ಗೆ ಕಂಪ್ಲೇಂಟ್ ಕೊಟ್ಟಿದ್ದರೂ ಇನ್ನು ಇಲ್ಲಿಯವರೆಗೆ ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ? ಇವತ್ತು ಯಾರೋ ಚಾರ್ಜ್ ಎನ್ನುವವರು ಇದು ನಮ್ಮ ಆಫೀಸ್ ಎಂದು ಕೇಳಿದಾಕ್ಷಣ ಸರ್ಕಾರ ಸುಮ್ಮನೇ ಕೂತುಕೊಳ್ಳುವುದೇ? ಸರ್ಕಾರ ನಮ್ಮದೇ ಇದೇ, ಅಧಿಕಾರವಿದೆಂದು ಈ ರೀತಿ ನಡೆಯಿಸತಕ್ಕುದು ಸರಿಯಾದ ಕ್ರಮವಲ್ಲ ಆದುದರಿಂದ ತಾವು ಶ್ರವಣಬೆಳಗೊಳದಲ್ಲಿ ಏನು ಹೇಳಿರುತ್ತೀರೋ ಎಂಬುದನ್ನು ದಯವಿಟ್ಟು ನೆನಪಿಟ್ಟುಕೊಂಡು ಹೇಳಿಬಿಡಿ ಸಾಕು.

ಶ್ರೀ ಕೆ. ಎಚ್. ಶ್ರೀನಿವಾಸ್ (ಶಿವಮೊಗ್ಗ) —ಅಧ್ಯಕ್ಷರೇ, ನಿನ್ನೆ ನಡೆದಿರತಕ್ಕ ದಾಳಿಯ ಬಗ್ಗೆ ಸಾಕಷ್ಟು ಪ್ರಸ್ತಾಪವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳವರು ಒಂದು ಕಾನೂನು ಬದ್ಧವಾದ ಹೇಳಿಕೆ ಯನ್ನು ಇಲ್ಲಿ ಕೊಟ್ಟಿದ್ದಾರೆ. ಏನೋ ಆಗಿದೆ ಹಾಗೆ ಒಗೆ ಇಂಥಾ ಕ್ರಮಗಳು ಆಗಿದೆ, ಯಾರೋ ಮೂರನೆಯವರು ಎಲ್ಲೋ ಒಂದು ಕಡೆ ಒಂದು ಕಾನೂನು ಬಾಹಿರವಾದ ಚಟುವಟಿಕೆಯಲ್ಲಿ ನಡೆಸಿದ್ದ ರಿಂದ ಸರ್ಕಾರ ಆದರ ಮೇಲೆ ಕ್ರಮ ತೆಗೆದುಕೊಂಡಿದೆಂದು ಅಷ್ಟೇ ಸರಳವಾದ ವಿಷಯವಾಗಿದ್ದಿದ್ದರೆ, ಆದಕ್ಕೆ ಮುಖ್ಯಮಂತ್ರಿಗಳವರು ಹೇಳಿಕೆ ಕೊಟ್ಟಿದ್ದನ್ನು ಒಪ್ಪಿಕೊಂಡೋ ಅಥವಾ ಇಲ್ಲ ಅದಕ್ಕೆ ಒಂದೆರಡು ಕ್ಲಾರಿಫಿಕೇಷನ್ ಕೇಳಿ ಬಿಟ್ಟೋ ಹೋಗಬಹುದಾಗಿತ್ತು. ಅಥವಾ ಅಲ್ಲಿ ಮೈಕೋ ನೌಕರರ ಒಂದು ಮೀಟಿಂಗ್ ಇತ್ತು ಅದಕ್ಕೆ ಅವರು ಸರಿಯಾದ ಪರಿವಾನಿಗೆಯನ್ನು ಪಡೆದಿದ್ದರೋ ಇಲ್ಲವೋ ಎನ್ನುವ ಬಗ್ಗೆ ಪ್ರಸ್ತಾಪವಿಲ್ಲ. ಏನೋ ಮೀಟಿಂಗ್ ನಡೆಯುವಂಥಾ ಪ್ರಸಂಗದಲ್ಲಿ ಇಂಥಾ ಘಟನೆಯಾಗಿರು ವಂಥಾದ್ದು ಅಲ್ಲ, ಅಲ್ಲಿ ಅವರು ಪಕ್ಷದ ಬೋರ್ಡ್‌ಗಳನ್ನು ಕಿತ್ತು ಹಾಕಿ ಬಿಟ್ಟು, ಅಲ್ಲಿ ಮಾಡಿರತಕ್ಕ ದಾಂದಲೆಯನ್ನು ನೋಡಿದರೆ ಯಾರಿಗಾದರೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದರ ಒಂದು ಯೋಜನೆ ಯನ್ನಿಟ್ಟುಕೊಂಡೇ ಈ ಕೆಲಸ ನಡೆದಿದೆ ಎಂದು ಮತ್ತೆ ಅವರ ಉದ್ದೇಶಕ್ಕೆ ತಕ್ಕಂತೆ ಸಂಪೂರ್ಣವಾಗಿ ಪೋಲೀಸಿನವರ ಅಭಯ ಹಸ್ತ ಅವರ ರಕ್ಷಣೆ ಬಲದ ಮೇಲೆ ಈ ಕೆಲಸ ನಡೆದಿದೆ ಎನ್ನುವುದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಒಂದು ಸಣ್ಣ ಪ್ರಮಾಣದ ಮುಂದೆ ಹೇಳಿದರೂ ಕೂಡ ಆದು ತೀರ್ಮಾನ ಕೊಡುವ ರೀತಿಯಲ್ಲಿ ಇದು ನಡೆದಿದೆ. ಹೀಗಿರುವಂಥಾ ಸಂದರ್ಭದಲ್ಲಿ ಕಳೆದ ವಾರ ಅಷ್ಟೇ, ನಾನು ಚರ್ಚೆ ನಡೆಯುವಂಥಾ ಸಂದರ್ಭದಲ್ಲಿ ಹೇಳಿದ್ದೆ ಆಡಳಿತ ನಡೆಸತಕ್ಕಂಥ ಕಡೆಯವರು ಈ ರೀತಿಯಾಗಿ ಎಲ್ಲಾ ಕಡೆಯೂ ತಮ್ಮ ಕೈಗೆ ಅಧಿಕಾರವನ್ನು ತೆಗೆದುಕೊಂಡು ಗಲಾಟೆ ಮಾಡುತ್ತಾ ಹೋದರೆ ಇನ್ನು ಮುಂದೆ ಬಹಳ ಕಷ್ಟವಾಗುತ್ತದೆ ಆದುದರಿಂದ ಇದನ್ನು ಕೂಡಲೇ ನಿಲ್ಲಿಸಬೇಕೆಂದು ಹೇಳಿದ್ದೆ. ಆದರೆ ಇವತ್ತು ಅಧಿಕಾರ ಬರಬಹುದು ಅಧಿಕಾರ ಹೋಗಬಹುದು. ಎಷ್ಟು ಬೇಗ ಬಂತೋ ಅಷ್ಟೇ ಬೇಗ ಹೋಗಬಹುದು ಎನ್ನತಕ್ಕದ್ದನ್ನು ನಾವು ಎಲ್ಲರೂ ಕೂಡ ಸಾಕ್ಷಿ ಇದ್ದೇವೆ. ಅಧಿಕಾರ ಬಂದಾಕ್ಷಣ ಅದನ್ನು ನಿರ್ವಹಣೆ ಮಾಡುವುದಕ್ಕೆ ಯಾವ ಒಂದು ಅಚ್ಚುಕಟ್ಟು ಇಲ್ಲದೆ ನಡೆದು ಹೋಗುತ್ತದೆ ಹೇಗೆ ಬೇಕಾದರೆ ರಾಜ್ಯ ನಡೆಸಬಹುದು ಎನ್ನತಕ್ಕ ಭಾವನೆ ಇದ್ದರೆ, ನಾವು ಆದರ ಬಗ್ಗೆ ಮಾತನಾಡೋಣ. ಕಳೆದ ವಾರ ಮಾತನಾಡುವಾಗ ನಾನು ಹೇಳಿದ್ದೆ ನಾವು ಪ್ರಾಮಾಣಿಕವಾಗಿ ರಸ್ತೆಯಲ್ಲಿ ತಿರುಗಾಡುವುದಕ್ಕೆ ಯೋಗ್ಯತೆ ಇದ್ದರೆ ಬದುಕೋಣ ಇಲ್ಲದಿದ್ದರೆ ಸುಮ್ಮನೇ ಮನೆಯಲ್ಲಿ ಬಾಗಿಲು ಹಾಕಿಕೊಂಡು ಬದುಕೋಣ ಎನ್ನುವ ತೀರ್ಮಾನ ಬರಬೇಕಾಗುತ್ತದೆಂದು ಹೇಳಿದ್ದಾಗ. ಆ ಘಟನೆಯ ಬಗ್ಗೆ ಮಾನ್ಯ ಅರ್ಥ ಮಂತ್ರಿಗಳವರು ಸಹ ವಿಶಾದಿಸುತ್ತಾ. ಇಂಥಾ ಘಟನೆ ಇನ್ನು ಮುಂದೆ ಎಲ್ಲೂ ನಡೆಯುವುದಕ್ಕೆ ಅವಕಾಶ ಮಾಡಿಕೊಡುವು ದಿಲ್ಲ, ಈ ರೀತಿಯ ಚಟುವಟಿಕೆಗಳು ನಡೆಯುವುದಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿದ್ದರೋ ಅದೇ ರೀತಿಯ ಚಟುವಟಿಕೆಗಳು ಇವತ್ತಿನ ದಿವಸವೂ ನಡೆದಿದೆ.

ಶ್ರೀ ಎಂ. ಹೆಚ್. ಶ್ರೀನಿವಾಸ್

ನಾವು ಅವರನ್ನು ಅನಾಮಧೇಯರು ಎಂದು ಕರೆದೆವು ಎಂದು ಮಾನ್ಯ ಶೀರ್ನಾಳಿ ಚಂದ್ರಶೇಖರ್ ರವರ ವಾದ. Sri Sheernali Chandrashekar and Sri Mallur Anand Rao both are more Royal than the king. In his statement, the Hon. Chief Minister has stated thus :

"The Police arrived in time to prevent any breach of peace there. This time, a group calling themselves Congress–I"...

ನಿಜ. ಮಾನ್ಯ ಮುಖ್ಯ ಮಂತ್ರಿಯವರು ಅದು ಅಧಿಕೃತವಾಗಿ ಕಾಂಗ್ರೆಸ್–ಐ ಹೌದೇ ಅಲ್ಲವೇ ಎಂಬುದನ್ನು ವೇರಿಫೈ ಮಾಡಿಸಬೇಕೆಂದು ಹೇಳುತ್ತಾರೆ. ಇದು ನಾವು ಹೇಳತಕ್ಕದ್ದು ಅಲ್ಲ. ಅದು ನಮಗೆ ಗೊತ್ತಿದೆ ಮತ್ತು ಈ ಸದನಕ್ಕೂ ಗೊತ್ತಿದೆ. ಅಲ್ಲಿ ಹೋಗಿರತಕ್ಕವರು Just not a group calling themselves Congress-I ; they call that they are the owners of the Congress. They think that they are the persons who can manag men and matters in Congress–I. They think that they can do and undo things in the Congr-ss–I Party. Whether they are right or wrong, we should tell that they are not correct. ನಿಮ್ಮ ವಿಂಗ್ಸ್ ಮೇಲೆ ನಿಮಗೆ ಹತೋಟಿ ಇದೆ ಎಂದು ಭ್ರಮಿಸುವುದಕ್ಕೆ ನಮಗೆ ಸಾಧ್ಯವಿಲ್ಲ. ಒಂದೊಂದು ಸಾರಿ ಹುಚ್ಚಾಟಬ್ಟೆ ನಡೆದಂತೆ ಕೊಳ್ಳುತ್ತಿದ್ದರೆ ನೀವು ಅವರನ್ನು ಹತೋಟಿ ಮಾಡುವುದು ಹೇಗೆ? ಎಲ್ಲಿ ಕಾನೂನು ಚೌಕಟ್ಟು ಮೀರುತ್ತದೆ ಅಲ್ಲಿ ಮಾತ್ರ ಕಾರ್ಯ ನಿರ್ವಹಿಸಿದರೆ ನಿಮ್ಮ ಪಕ್ಷದ ಮೇಲೆ ಅಷ್ಟೇ ಹತೋಟಿಯನ್ನು ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ನಾನೇನು ನಿಮಗೆ ಅಡ್ವೈಸ್ ಮಾಡಬೇಕೆಂದು ಹೇಳುತ್ತಿಲ್ಲ ಸಮಸ್ಯೆ ಗೊತ್ತಿರುವುದರಿಂದ ಹೇಳುತ್ತಿದ್ದೇನೆ. ಇವತ್ತು ಆ ಜಾಗ ನಮ್ಮದೇ ಎಂದು ಮಾನ್ಯ ಜಾರ್ಜ್‌ರವರು ಹೇಳಿದ್ದಾರೆ. ಅವರು ತಮ್ಮ ಹೇಳಿಕೆಯ ಕೊನೆಯಲ್ಲಿ ಏನು ಹೇಳಿದ್ದಾರೆಂದರೆ, ಈ ಜಾಗವನ್ನು ಮಾನ್ಯ ದೇವರಾಜ ಅರಸು ಮತ್ತು ಮಾನ್ಯ ಚಂದ್ರೇಗೌಡರು ಆಕ್ರಮವಾಗಿ ಆಕ್ರಮಿಸಿಕೊಂಡು ಈಗ ಸಿಪಿಐ. ನಾಯಕರ ಕೈಗೆ ಕೊಟ್ಟಿದ್ದಾರೆ. ಈ ಚಟುವಟಿಕ್ಕೆ ನಮ್ಮ ಕಾರ್ಯಕರ್ತರನ್ನು ರೇಗಿಸಿವೆ. ಈಗ ಆ ಜಾಗವನ್ನು ನಾವು ವಶಪಡಿಸಿಕೊಂಡಿದ್ದೇವೆ. ಈ ನಾಯಕರ ಆಕ್ರಮ ಚಟುವಟಿಕೆ ನಿಲ್ಲದಿದ್ದರೆ ನಾವು ಅಹಿಂಸಾತ್ಮಕವಾಗಿ ಹೋರಾಡುತ್ತೇವೆ. ಇದು ಅವರ ಹೇಳಿಕೆ. ನಮಗೆ ಗೊತ್ತಿದ್ದ ಹಾಗೆ ಅವರು ಪಕ್ಷದ ಅಧಿಕೃತ ಸ್ಥಾನಮಾನ ಹೊಂದಿರತಕ್ಕವರು.

SRI SHEERNALI M. CHANDRASHEKAR.—I thank the hon. Member Sri K. H. Srinivas.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನೀವು ಏಕೆ ನನಗೆ ಥ್ಯಾಂಕ್ಸ್ ಹೇಳಬೇಕು. You go and thank Sri K. J George He has come out with a statement you thank god. ನಾವು ಹೋಗಿ ವಶಪಡಿಸಿಕೊಂಡಿದ್ದೇವೆಂದರೆ ಯುದ್ಧ ಮಾಡಿ ವಶಪಡಿಸಿಕೊಂಡಿದ್ದೇವೆಯೆ? ಈ ವಿಷಯಕ್ಕೆ ಸಂಪೂರ್ಣವಾಗಿ ಕನ್ನಡಿ ಹಿಡಿಯತಕ್ಕ ಮಾತು ಇದು. ನಾವು ಹೆಚ್ಚಾಗಿ ವಾದ ವಿವಾದ ಮಾಡತಕ್ಕ ಅವಶ್ಯಕತೆ ಇಲ್ಲ. ಸಬ್–ಡಿವಿಜನ್ ಮ್ಯಾಜಿಸ್ಟ್ರೇಟರು ಆರ್ಡರ್ ಮಾಡಿದ್ದಾರೆ ಮತ್ತು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತಾರೆ. ನಡೆದಿರತಕ್ಕ ಘಟನೆಯಲ್ಲಿ ಯಾರ್ಯಾರು ಭಾಗಿಯಾಗಿದ್ದಾರೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಆ ದೃಷ್ಟಿಯಿಂದ ಕೇವಲ ಕಾನೂನು ಬದ್ಧವಾಗಿ ಹೇಳಿಕೊಟ್ಟರೆ ನಿಮ್ಮ ಜವಾಬ್ದಾರಿ ಮುಗಿಯುವುದಿಲ್ಲ. ಏಕೆಂದರೆ ಅದಕ್ಕಿಂತ ದೊಡ್ಡ ಜವಾಬ್ದಾರಿ ತಪ್ಪು ಮೇಲಿದೆ. ತಾವು ಬನ್ನಿ ಕಾಂಗ್ರೆಸ್–ಐ ಪಕ್ಷಕ್ಕೆ ರಕ್ಷಣೆ ಕೊಡತಕ್ಕವರು ಅಲ್ಲ. ರಾಜ್ಯದ ಗೃಹಮಂತ್ರಿಯಾದ ನೀವು ಎಲ್ಲ ಪಕ್ಷಗಳನ್ನು ರಕ್ಷಿಸಬೇಕಾಗಿದೆ. ಯಾವುದೇ ಸಾರ್ವಜನಿಕರ ಚಟುವಟಿಕೆಯಲ್ಲಿ ತೊಡಗಿರತಕ್ಕವರಿಗೆ ರಕ್ಷಣೆ ಕೊಡತಕ್ಕ ಜವಾಬ್ದಾರಿಯನ್ನು ಹೊತ್ತವರು ಕೇವಲ ಕಾನೂನಿಗೆ ಮಾತ್ರ ಕನ್ನಡಿ ಹಿಡಿಯುವ ರೀತಿಯಲ್ಲಿ ಹೇಳಿಕೆ ಕೊಟ್ಟರೆ ಆದರಿಂದ ನಿಮ್ಮ ಜವಾಬ್ದಾರಿಯನ್ನು ನಿರ್ವಹಿಸಿದಂತಾಗುವುದಿಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇದ್ದಿ ಪೋಲೀಸರಿಗೆ ಸ್ಪಷ್ಟವಾಗಿ ಗೊತ್ತಿದೆ. There may be umpteen police records to show that this place has been in

possession of Congress-U. ಬೇಕಾದಷ್ಟು ಆರ್ಜಿಗಳನ್ನು ಕೊಟ್ಟು ಪರ್ಮಿಷನ್ ತೆಗೆದು ಕೊಳ್ಳಲಾಗಿದೆ. ಇದೆಲ್ಲ ಪೋಲೀಸರಿಗೆ ಚೆನ್ನಾಗಿ ಗೊತ್ತಿದೆ. ಗೊತ್ತಿದ್ದೂ ಗೊತ್ತಿದ್ದೂ ಪ್ರೊಸಿಷನ್ ಬಗ್ಗೆ ಡಿಸ್‌ಪ್ಯೂಟ್ ಬಂದಿರುವ ನಾಟಕ ವರ್ಮಡಿಸಿ ಸಬ್-ಡಿವಿಜನ್ ಮ್ಯಾಜಿಸ್ಟ್ರೇಟರಿಗೆ ತಪ್ಪು ಕಲ್ಪನೆ ನೀಡಿ ಆರ್ಡರ್ ಪಡೆದಿದ್ದಾರೆ. ಬೆಕ್ಕು ಕಣ್ಣು ಮುಚ್ಚಿಕೊಂಡು ಹಾಲು ಕುಡಿಯಬಹುದು, ಆದರೆ ಅದು ಜಗತಿಗೆ ಕಾಣುವುದಿಲ್ಲವೆಂದು ಭಾವಿಸಿದ್ದರೂ ಕೂಡ ಕಂಡೇ ಕಾಣುತ್ತದೆ. ಆದುದರಿಂದ, ದಯವಿಟ್ಟು ಇದರ ಬಗ್ಗೆ ತಮ್ಮ ಪರಿಪೂರ್ಣ ಜವಾಬ್ದಾರಿಯನ್ನು ಇತ್ಯರ್ಥವಾಗುವ ರೀತಿಯಲ್ಲಿ ನಿರ್ವಹಿಸುವುದಕ್ಕೆ ಮನಸ್ಸು ಮಾಡಬೇಕೆಂದು ಹೇಳುತ್ತೇನೆ ಸುಮ್ಮನೆ ಈ ರೀತಿ ಕಣ್ಣು ಕಟ್ಟುವ ಉತ್ತರ ನೀಡಿ ನಮ್ಮನ್ನು ಮತ್ತು ದೇಶದ ಜನರನ್ನು ತೃಪ್ತಿಪಡಿಸುವುದು ಸಾಧ್ಯವಿಲ್ಲ.

MR. SPEAKER.—Hon. Members Sri B. V. Kakkilaya and Sri Pampapathi have given notice to raise the same matter which we are discussing now. So, I would permit them to speak for a period of four minutes each.

SRI SHEERNALI M. CHANDRASHEKAR.—Sir,. ನಾನು ಒಂದು.....

ಅಧ್ಯಕ್ಷರು.—ತಾವು ರೂಲ್ ೬೩ನ್ನು ತೋರಿಸಿದ್ದೀರಿ. ನಾನು ಈಗ ಕಕ್ಕಿಲಾಯ ಅವರನ್ನು ಕರೆದಿದ್ದೇನೆ.

SRI SHEERNALI M. CHANDRASHEKAR.—(* ** **) It is alright You have to relax...

ಶ್ರೀ ಹೆಚ್. ಗಂಗಾಧರನ್.—Sir, ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ.....

MR. SPEAKER.—I have not called the hon. Member Sri H. Gangadharan. Now, Sri B. V. Kakkilaya will speak.

SRI H. GANGADHARAN.—Sir, I am raising a point of order.....

SRI S. M. SHEERNALI M. CHANDRASHEKAR.—If the hon. Speaker had relaxed the rule.....

MR. SPEAKER.—Please resume your seat.

SRI S. M. SHEERNALLI M. CHANDRASHEKAR.—Sir, after the speech of the hon. Member Sri Kakkilaya, please permit me to speak. I want only two clarifications.

MR. SPEAKER.—I request the Chief whip to talk to the hon. Member Sri S. M. S. Chandrashekar.

SRI S. M. SHEERNALLI CHANDRASHEKAR.—Sir...

MR. SPEAKER.—Please read the rule No. 63.....

SRI S. M. SHEERNALLI CHANDKASHEKAR.—But, when you have relaxed that rule, I am also...

MR. SPEAKER.—I request the hon. Member to resume his seat.

ಶ್ರೀ ಹೆಚ್. ಗಂಗಾಧರನ್.—ಮಾನ್ಯ ಸದಸ್ಯರು ಪಾರ್ಲಿಯಾಲಿಟಿ ಅಂದರೆ.

ಅಧ್ಯಕ್ಷರು.—ಅದು ನನಗೆ ಕೇಳಲಿಲ್ಲ.

* * * Matter expunged as orderd by the Chair

† ಶ್ರೀ ಬಿ. ವಿ. ಕಕ್ಕಿಲಾಯ.—ನಿನ್ನೆ ನಡೆದ ಘಟನೆ ಪತ್ರಿಕೆಯಲ್ಲಿ ಬಂದದನ್ನು ನೋಡಿ ನಾನು ನೋಟೀಸ್ ಕಳುಹಿಸಿದ್ದೆ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಒಂದು ಹೇಳಿಕೆ ನೀಡಿದ್ದಾರೆ. ನಾನು ಈ ಸದನಕ್ಕೆ ಬರುವಾಗ, ಇದು ಅಂಥ ವಿಕೋಪಕ್ಕೆ ಹೋಗಲಾರದು. ಕ್ರಮ ತೆಗೆದುಕೊಳ್ಳುತ್ತಾರೆ ಅನ್ನುವ ಭರವಸೆಯಿಂದ ಬಂದೆ, ಆದರೆ ಈಗ ಬಂದಂತಹ ವರ್ತಮಾನ ಬೇರೆ. ಇದನ್ನು ನೋಡಿದರೆ, ಇದರ ಬಗ್ಗೆ ಮಾನ್ಯ ಶ್ರೀನಿವಾಸ್‌ರವರು ಏನು ಸಂಶಯ ವ್ಯಕ್ತಪಡಿಸಿದರು ಆ ಸಂಶಯಕ್ಕೆ ಬಲವಾದ ಆಧಾರ ಇದೆ ಎಂಬುದು ನನಗಂತೂ ಸ್ಪಷ್ಟವಾಗುತ್ತದೆ. ತಮಗೆ ಗೊತ್ತಿದ್ದ ಹಾಗೆ ಸುಭಾಷ್ ನಗರದಲ್ಲಿ ಕಾಂಗ್ರೆಸ್-ಯು ಕಛೇರಿ ಏನು ಇದೆ ಆ ಸ್ಥಳದಲ್ಲಿ ಕೆಲವೇ ದಿನಗಳ ಹಿಂದೆ ಒಂದು ಬೃಹತ್ ಮೆರವಣಿಗೆ ಪ್ರದರ್ಶನ ನಡೆಯಿತು. ಆಗ ಅಲ್ಲಿ ಲಕ್ಷಾಂತರ ಜನ ಸೇರಿದ್ದರು ಅನ್ನುತ್ತಾರೆ, ನಮ್ಮ ಲೆಕ್ಕದಲ್ಲಿ ಸಾವಿರಾರು ಜನ ಸೇರಿದ್ದರು ಎಂದು ಹೇಳಬಹುದು. ರಾಜ್ಯದ ನಾನಾ ಭಾಗಗಳ ಜನರು ಅಲ್ಲಿ ಸೇರಿ ಮೆರವಣಿಗೆ ಪ್ರದರ್ಶನ ನಡೆಯಿತು ಈ ವಿಚಾರ ರಾಜ್ಯದ ಎಲ್ಲ ಜನರಿಗೂ ಗೊತ್ತು ಮತ್ತು ಪೋಲೀಸರಿಗೂ ಗೊತ್ತು ಹಾಗೂ ಸರ್ಕಾರಕ್ಕೂ ಗೊತ್ತು. ಮೆರವಣಿಗೆ ನಡೆದ ಸಂದರ್ಭದಲ್ಲಿ ಪ್ರಗತಿಪರ ಜನರಂಗದ ಕಛೇರಿ ಕೂಡ ಅಲ್ಲಿ ಇತ್ತು. ನಾನೂ ಕೂಡ ಅದರಲ್ಲಿ ಕನ್‌ವೇನರ್ ಆಗಿದ್ದೆ. ನಾನು ಮತ್ತು ಮಾನ್ಯ ಚಂದ್ರೇಗೌಡರು ಆ ಕಛೇರಿಯಲ್ಲಿ ಎಷ್ಟೋ ಸಾರಿ ಸಭೆ ಸೇರಿದ್ದೇವೆ. ಆಗ ಯಾವುದೇ ಗಲಾಟೆ ಆಗಲಿಲ್ಲ. ನಾವು ಅಲ್ಲಿ ಈ ವಿಚಾರವನ್ನು ಚರ್ಚೆ ನಡೆಸಿದ್ದೇವೆ. ಅದು ಅವರ ಸ್ವಾಧೀನದಲ್ಲೇ ಇತ್ತು ಎಂಬುದಕ್ಕೆ ನಾನೇ ಸಾಕ್ಷಿ. ಈ ರಾಜ್ಯದ ಎಲ್ಲ ಜನರು ಇದಕ್ಕೆ ಸಾಕ್ಷಿ. ಆದರೆ ಕಾಂಗ್ರೆಸ್-ಯು ವಿಭಾಗದ ನಾಯಕರಾದರೂ ಕೂಡ, ಅವರಿಗೆ ಇದನ್ನು ಪ್ರಶ್ನೆ ಮಾಡುವುದಕ್ಕೆ ಏನು ಅಧಿಕಾರ ಇದೆ? ಹೇಗೆ ಪ್ರಶ್ನೆ ಮಾಡುತ್ತಾರೆ? ಪ್ರಶ್ನೆ ಮಾಡುವುದು ಅಷ್ಟೇ ಅಲ್ಲ. ತಮಗೆ ತೋರಿದ ರೀತಿಯಲ್ಲಿ ಅವರ ಹಕ್ಕನ್ನು ಸ್ಥಾಪನೆ ಮಾಡಲಿಕ್ಕೆ ಬರುತ್ತದೆಂದರೆ ಈ ನಮ್ಮ ರಾಜ್ಯದಲ್ಲಿ ಅಪಾಯಕಾರಿ ಪ್ರವೃತ್ತಿ ಬೆಳೆಯುತ್ತಿದೆ ಎಂಬುದಕ್ಕೆ ಇದೇ ಮುಖ್ಯವಾದ ಆಧಾರ. ಇದರ ಹಿನ್ನೆಲೆಯಲ್ಲಿ ನೋಡಿದರೆ ಮೈಕೋದಲ್ಲಿ ಕೆಲವೇ ದಿವಸದ ಹಿಂದೆ ಅಲ್ಲಿ ಸಭೆ ನಡೆಸುವಾಗ ಇದೇ ಗುಂಪಿನ ಜನ, ಇದೇ ಸಂಸ್ಥೆಯ ಜನ ಅಲ್ಲಿ ಗಲಾಟೆ ಮಾಡಿದರು.

MR. SPEAKER.—You are not concerned with this.

ಶ್ರೀ ಬಿ. ವಿ. ಕಕ್ಕಿಲಾಯ.—ಇದರ ಹಿನ್ನೆಲೆ ಹೇಳುತ್ತಿದ್ದೇನೆ. ಇದೇ ವಿಚಾರ ಈ ಸದನದಲ್ಲಿ ಚರ್ಚೆಗೆ ಬಂದಿತ್ತು.

ಅಧ್ಯಕ್ಷರು.—ತಮ್ಮ ನೋಟೀಸಿನಲ್ಲಿ ಏನಿದೆ ಎಂಬುದನ್ನು ನಾನು ಓದಲೆ? ೧೬-೩-೧೯೧೯ನೇ ದಿನಾಂಕ ಬೆಳಿಗ್ಗೆ ೯-೩೦ರ ಹೊತ್ತಿನಲ್ಲಿ ಸುಭಾಷ್ ನಗರದಲ್ಲಿರುವ ಕಾಂಗ್ರೆಸ್ (ಯು) ಕಛೇರಿ ಮೇಲೆ ಕಾಂಗ್ರೆಸ್ (ಐ)ನ ೨೦೦ ಜನರ ಒಂದು ತಂಡ ದಾಳಿ ನಡೆಸಿ ಅದನ್ನು ಪರಭಾರೆಮಾಡಿಕೊಂಡಿದೆ, ಈ ವಿಚಾರದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯುತ್ತೇನೆ ಎಂದು ಹೇಳಿದ್ದೀರಿ. ಆದ್ದರಿಂದ ಬೇರೆ ವಿಚಾರ ಬೇಡ.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಮುಖ್ಯಮಂತ್ರಿಗಳು ಅವರ ಉತ್ತರದಲ್ಲಿ ಈ ವಿಷಯ ಪ್ರಸ್ತಾಪ ಮಾಡಿದ್ದಾರೆ.

ಅಧ್ಯಕ್ಷರು.—ಅವರ ಹೇಳಿಕೆಯಿಂದ ಉದ್ಭವವಾಗತಕ್ಕ ವಿಚಾರದಲ್ಲಿ ಸಂಶಯಕ್ಕೆ ಎಡೆ ಕೊಡುವಂತಿದ್ದರೆ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಬಿ. ವಿ. ಕಕ್ಕಿಲಾಯ.—ಮೈಕೋ ಕೆಲಸಗಾರರ ಸಭೆ ನಡೆಯುತ್ತಿತ್ತು, ವಿತಕ್ಕೆ ನಡೆಯುತ್ತಿತ್ತು ಎಂಬುದು ಗೊತ್ತಿದೆ. ಸಭೆ ನಡೆಯುತ್ತಿರುವಾಗಲೇ ಇವರು ಹೋದರು ಎಂಬ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ಆಕಸ್ಮಿಕವಾಗಿ ನಡೆದಿರುವ ಘಟನೆ ಎಂಬುದಾಗಿ ನಾವು ತಿಳಿದುಕೊಳ್ಳುವುದಕ್ಕಾಗುವುದಿಲ್ಲ. ಇದರ ಹಿನ್ನೆಲೆಯನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ, ಸದನದ ಗಮನಕ್ಕೆ ಹಲವಾರು ಬಾರಿ, ಹಲವಾರು ಘಟನೆಗಳು ನಡೆದಾಗ ತಂದರೂ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ ಇವತ್ತು ಈ ಪಟ್ಟಕ್ಕೆ ಹೋಗಿದೆ. ಈ ಒಂದು ಕಾನೂನನ್ನು ತಮ್ಮ ಸ್ವಂತ ಕೈಯಲ್ಲಟ್ಟುಕೊಂಡು ರಾಜಕೀಯ ವಿರೋಧಿಗಳ ಮೇಲೆ ಆಥವಾ ವಿರೋಧಪಕ್ಷದ ಮೇಲೆ ಪ್ರಯೋಗ ಮಾಡಲಿಕ್ಕೆ ಅವಕಾಶವಾಗುವುದನ್ನು ಮಾನ್ಯ ಮುಖ್ಯ ಮಂತ್ರಿಗಳು ತಡೆಗಟ್ಟದಿದ್ದರೆ ಬಹುಶಃ ಈ ಸದನಕ್ಕೆ ಸದಸ್ಯರು ಬರುವುದೇ ಕಷ್ಟವಾಗಬಹುದು. ರಾಜ್ಯದ ರಾಜಕೀಯ ಪಕ್ಷಗಳು ತಮ್ಮ ಕಛೇರಿಯಲ್ಲಿ ಸ್ವತಂತ್ರವಾಗಿ,

ಘಟನಾಬದ್ಧವಾಗಿ ಕೆಲಸ ಮಾಡುವುದಕ್ಕೆ ಕಷ್ಟವಾಗಬಹುದು. ಇದಲ್ಲದೆ ಬೇರೆ ಸಾಮಾಜಿಕ ಸಂಘಟನೆಗಳಿಗೆ ಸಂಬಂಧಪಟ್ಟಂತೆ ತೀರ್ಮಾನ ಮಾಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಪ್ರಯತ್ನಪಟ್ಟಿದ್ದಾರೆ, ಅದಕ್ಕೆ ನಾವೂ ಸಹಕಾರ ಕೊಟ್ಟಿದ್ದೇವೆ. ಆದರೆ ಕಾನೂನನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಇತರರನ್ನು ದಮನ ಮಾಡುವಂಥ ವರ್ತನೆ ಮಾಡುವವರಿಗೆ ಈ ರಾಜ್ಯದಲ್ಲಿ ಕಾಂಗ್ರೆಸ್ (ಐ) ಎಂದು ಹೆಸರಿಟ್ಟುಕೊಂಡು ಹೋದರೆ ಪೋಲೀಸರೂ ಅವರ ಹಿಂದೆ ಹೋಗಿ ಅವರಿಗೆ ರಕ್ಷಣೆ ಕೊಡುತ್ತಾರೆ. ಏನು ಮಾಡಿದರೂ ನಡೆಯುತ್ತದೆ ಎಂಬ ಧೈರ್ಯ ಅವರಿಗೆ ಬರುತ್ತದೆ. ಇಂಥ ಒಂದು ವಾತಾವರಣವನ್ನು ದಯ ಮಾಡಿ ಈ ರಾಜ್ಯದಲ್ಲಿ ಸೃಷ್ಟಿ ಮಾಡಬೇಡಿ. ಈಗ ಆಗಿ ಹೋಗಿದೆ. ಇದನ್ನು ಮುಕ್ತಾಯ ಮಾಡುವ ರೀತಿಯಲ್ಲಿ ಬಲವಾದ, ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳುವ ಬಗ್ಗೆ ಆಶ್ವಾಸನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ರಾಜ್ಯದಲ್ಲಿ ಪ್ರಜಾಪ್ರಭುತ್ವ ರೀತಿಯಲ್ಲಿ ರಕ್ಷಣಾಬದ್ಧವಾಗಿ ರಾಜಕೀಯ ಕೆಲಸಗಳನ್ನು ಮಾಡುವುದಕ್ಕೆ, ಸಂಘಟನೆ ಕೆಲಸ ಮಾಡುವುದಕ್ಕೆ ಅವಕಾಶ ಇದೆಯೋ ಇಲ್ಲವೋ, ಅಥವಾ ಯಾರದ್ದಾದರೂ ಪರವಾನಗಿತೆಗೆದುಕೊಂಡು ಮಾಡಬೇಕೇ ಕಾನೂನು ಬದ್ಧವಾಗಿ ನಮಗಿರುವ ಹಕ್ಕನ್ನು ಚಲಾಯಿಸುವುದಕ್ಕೆ ಅಧಿಕಾರವಿದೆಯೋ ಇಲ್ಲವೇ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಗಳು ಹೇಳಬೇಕು. ಮತ್ತು ನಮಗಿರುವ ಹಕ್ಕನ್ನು ರಕ್ಷಣೆ ಮಾಡುವ ಜವಾಬ್ದಾರಿಯನ್ನು ನಿರ್ವಹಿಸಬೇಕೆಂದು ಕೇಳಿಕೊಳ್ಳುತ್ತಿದ್ದೇವೆಯೋ ಹೊರತು, ವಿನಯಪೂರ್ವಕವಾಗಿ ಭಿನ್ನಹ ಮಾಡಲಿಕ್ಕೆ, ಭಿಕ್ಷೆ ಮಾಡಲಿಕ್ಕೆ ಬಂದಿಲ್ಲ ಎಂದು ಈ ಸದನದಲ್ಲಿ ಸ್ಪಷ್ಟಪಡಿಸುವುದಕ್ಕೆ ಇಷ್ಟಪಡುತ್ತೇನೆ.

† ಶ್ರೀ ಪಂಪಾವತಿ.—ಮಾನ್ಯ ಅಧ್ಯಕ್ಷರೇ,.....

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರುಗಳು ಏನು ಪ್ರಸ್ತಾಪ ಮಾಡಿದ್ದಾರೆ ಅದನ್ನು ಬಿಟ್ಟು ಬೇರೆ ಇದ್ದರೆ ಹೇಳಿ.

ಶ್ರೀ ಪಂಪಾವತಿ.—ಈ ರಾಜ್ಯದಲ್ಲಿ ಪಾಳೇಗಾರಿಕೆ ಪದ್ಧತಿ ಕೊನೆಗಾಣಬೇಕು ಎಂದು ಹೇಳುತ್ತಿದ್ದೇನೆ. ಹಿಂಗೆ ಮುಂದುವರೆದ ಕರ್ನಾಟಕದ ಜನ ಸುಮ್ಮನೆ ಬಿಡುವುದಿಲ್ಲ, ಬುದ್ಧಿ ಕಲಿಸುತ್ತಾರೆ ಎಂಬುದನ್ನು ಹೇಳುತ್ತಿದ್ದೇನೆ. ಕರ್ನಾಟಕದ ರಾಜಧಾನಿಯಲ್ಲಿ ಇವತ್ತು ಒಂದು ಪಕ್ಷದ ಕಛೇರಿಗೆ ನುಗ್ಗಿ ಬೋರ್ಡುಗಳನ್ನು ಕಿತ್ತುಹಾಕುತ್ತಿದ್ದರೂ ಪೊಲೀಸರು ಸುಮ್ಮನೆ ನೋಡಿಕೊಂಡು ನಿಂತಿದ್ದರೆಂದರೆ ಬೇರೆ ಕಡೆ ಏನಾಗಬಹುದು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಆಂದರೆ ಈ ರಾಜ್ಯದಲ್ಲಿ ಬೇರೆ ಯಾವ ಪಕ್ಷವೂ ಇರಬಾರದೇ? ಇದೇನು ಇವರ ಗುತ್ತಿಗೆಯೇ? ಈ ಕೆಲಸ ಮಾಡಿದವರ ಮೇಲೆ ಕಾನೂನು ಪ್ರಕಾರ ಕ್ರಮ ಏತಕ್ಕೆ ತೆಗೆದುಕೊಳ್ಳಲಿಲ್ಲ? ಈ ಪ್ರಶ್ನೆಯನ್ನು ಪೋಲೀಸ್ ಕಮಿಷನರ್‌ರವರಿಗೆ ಹೇಳಿದರೆ ಅವರು ಹೇಳುತ್ತಾರೆ ಇದರಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳಿದ್ದಾರೆ. ಅದಕ್ಕೋಸ್ಕರ ಏನೂ ಮಾಡುವುದಕ್ಕಾಗುತ್ತಿಲ್ಲ ಎಂದು. ದೊಡ್ಡ ದೊಡ್ಡ ವ್ಯಕ್ತಿಗಳಿದ್ದರೆ ಏನೂ ಕ್ರಮ ತೆಗೆದುಕೊಳ್ಳಬಾರದೇ? ಸಾಮಾನ್ಯ ಜನರಾದರೆ ಬೂಟು ಕಾಲಿನಲ್ಲಿ ಒದೆಯಬೇಕೇ ? ಎಂ. ಎಲ್. ಎ. ಗಳು.....

ಅಧ್ಯಕ್ಷರು.—ಪಕ್ಷದ ನಾಯಕರು ಅದನ್ನೆಲ್ಲಾ ಹೇಳುತ್ತಾರೆ.

ಶ್ರೀ ಪಂಪಾವತಿ. ಮಾನ್ಯ ಮುಖ್ಯಮಂತ್ರಿಗಳು ಗೃಹಮಂತ್ರಿಗಳೂ ಆಗಿದ್ದಾರೆ. ಅವರಿಗೆ ಜವಾಬ್ದಾರಿ ಇದೆ ಅವರು ಬೆಂಗಳೂರಿನಲ್ಲಿರುವಾಗಲೇ ಈ ಘಟನೆ ನಡೆದಿದೆ ಪಕ್ಕದಲ್ಲಿ ಪೋಲೀಸನಿದ್ದಾರೆ ಪೋಲೀಸ್ ಸ್ಟೇಷನ್ ಇದೆ. ಅದರಲ್ಲೂ ಬೆಂಗಳೂರು ನಗರದ ಮಧ್ಯ ಭಾಗದಲ್ಲಿ ಇಂಥ ವ್ಯವಸ್ಥೆಯಾಗಿದೆಯೆಂದರೆ ಬೇರೆ ಕಡೆ ಏನಾಗಬಹುದು? ಆದ್ದರಿಂದ ಹೇಳುತ್ತಿದ್ದೇನೆ, ಇದನ್ನು ಕೂಡಲೇ ತಡೆಗಟ್ಟಬೇಕು. ಅನೇಕ ಸಂದರ್ಭದಲ್ಲಿ ಈ ರೀತಿಯ ವಿಷಯಗಳನ್ನು ಪ್ರಸ್ತಾಪ ಮಾಡಿದಾಗ ಕ್ರಮ ತೆಗೆದುಕೊಳ್ಳುತ್ತೇವೆಂದು ಸರ್ಕಾರದವರು ಹೇಳಿದ್ದಾರೆ. ಆದರೂ ಇದೇ ಗುಂಪಿನವರು ಇಂಥ ಕೃತ್ಯ ನಡೆಸುತ್ತಿದ್ದಾರೆ. ಪತ್ರಿಕೆಯವರ ಮೇಲೆ ಹಲ್ಲೆ ನಡೆಸಿದರು, ಕಾರ್ಮಿಕ ನಾಯಕರ ಮೇಲೆ ಹಲ್ಲೆ ನಡೆಸಿದರು, ಇವತ್ತು ಕಾಂಗ್ರೆಸ್ (ಯು) ಕಛೇರಿ ಮೇಲೆ ಹಲ್ಲೆ ನಡೆಸಿದ್ದಾರೆ ನಾಳೆ ಯಾರ ಮೇಲೆ ಮಾಡುತ್ತಾರೋ? ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದವರು ಏನು ಮಾಡಿದ್ದಾರೆ?

ಅಧ್ಯಕ್ಷರು.—ಪದೇಪದೇ ಅದನ್ನೇ ಹೇಳುತ್ತಿದ್ದೀರಲ್ಲ.

ಶ್ರೀ ಪಂಪಾವತಿ.—ಇನ್ನೇನು ಹೇಳಬೇಕು? ಆಗಿರುವುದನ್ನೆ ಹೇಳಬೇಕಾಗುತ್ತದೆ. ಇವರು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ ಮೇಲೆ ಹಲ್ಲೆಗಳು ಜಾಸ್ತಿ ನಡೆಯುತ್ತಿವೆ. ಇದಕ್ಕೆ ಕಾರಣ ಏನು?

ನಮಗೆ ಕೇಳುವುದಕ್ಕೆ ಅಧಿಕಾರವಿದೆ. ಇನ್ನು ಮುಂದಾದರೂ ಈ ರೀತಿ ಆಗದಂತೆ ಇದನ್ನು ಕೊನೆಗಾಣಿಸ ಬೇಕು. ಇಲ್ಲದಿದ್ದರೆ ಸುಮ್ಮನೆ ತುಳಿತುಕೊಳ್ಳುವುದಕ್ಕೆ ನಾವು ಬಂದಿಲ್ಲ. ಆದ್ದರಿಂದ ಈ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಅಧ್ಯಕ್ಷರೇ.....

ಶ್ರೀ ಶೀರ್ನಾಳಿ ಚಂದ್ರಶೇಖರ್.—ನಾನೂ ಎರಡು ಕ್ಲಾರಿಫಿಕೇಷನ್ ಕೇಳಬೇಕು.

ಅಧ್ಯಕ್ಷರು.—ರೂಲ್ ೬೩ರ ಪ್ರಕಾರ ಯಾರು ನೋಟೀಸ್ ಕಳುಹಿಸಿದ್ದಾರೋ ಅವರಿಗೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಮಳ್ಳೂರು ಆನಂದರಾವ್.—ನಮ್ಮ ಅಹವಾಲನ್ನೂ ಕೇಳಬೇಕು.

ಶ್ರೀ ಶೀರ್ನಾಳಿ ಚಂದ್ರಶೇಖರ್.—ರೂಲ್ ೬೩ನ್ನು ರಿಲ್ಯಾಕ್ಸ್ ಮಾಡಿದ್ದೀರಿ. ರಿಲ್ಯಾಕ್ಸ್ ಮಾಡಿದ ಮೇಲೆ.....

ಅಧ್ಯಕ್ಷರು.—ಉದ್ವೇಗದಿಂದ ಯಾವ ಫಲವೂ ದೊರೆಯುವುದಿಲ್ಲ.

SRI D. DEVARAJ URS.—I am concerned with this. It is our Party office which has been attacked. why it has been done is already given in a statement. I want to raise few points for the con sder-ation of the Goverument. If they can answer, well and good. If they do not, it is left to them. If the Chair permits me, I wish to raise a couple of points only I am not going to make a lengthy argument or statement here.

SRI S. R. BOMMAI —Sir, I appeal you.....

MR. SPEAKER.—I am sorry, I derive my rights from this August House. My conduct is always questioned. The hon, Member Sri Sheernali M. Chandrashekhar has used the word "Partiality".

SRI S. M. SHEERNALI CHANDRASHEKAR.—Sir, we are really un-fortunate

MR. SPEAKER —Please, Mr. Chandrashekar for heaven sake do not think that you are above this House.

SRI S. M. SHEERNALI CHANDRASHEKAR.—I am not above this House.

MR. SPEAKER.—Please resume your seat.

SRI S. M. SHEERNALI CHANDRASHEKAR.—I would like to clarify myself.

MR. SPEAKER.—I am not going to hear you. Please resume your seat. This is a very Caustic remark or statement from any member of this August House. If the House would agree that this type of expressions.

SRI J. H. PATEL.—The Hon. Member must apologize to the chair and the concerned portion should be expunged.

MR. SPEAKER.—Why this has come, just because I made a state-ment namely, that the Hon. Member pointed out Rule 63. I said that

I know Rule 63. He said, hitherto I was also allowing other Members taking into consideration the situation so that the discussion could be completed and all that. I said that in order not to displease, members from saying something to say, we were allowing. When the hon. Member sheernali M. Chandrashekhar particularly mentioned that I should stick to Rule 63. I think, from tomorrow onwards I must adhere myself 63, strictly. This is the context in which the Hon. Member Sri. Sheernali M. Chandrashekhar has made this remark. I think, it is not a happy remark. I want that it should be expunged from the records. I rule that it should be expunged from records. ನಾನು ಹಾಗೆ ಹೇಳಿದರೆ, ಇನ್ನೊಬ್ಬರು ಮಾನ್ಯ ಶೀರ್ನಾಳಿ ಚಂದ್ರಶೇಖರ್ ಅವರಿಗೆ ಏತಕ್ಕೆ ಕೊಡಲಿಲ್ಲ; ತಮಗೇತಕ್ಕೆ ಕೊಟ್ಟರಿ ಎನ್ನುವ ಪ್ರಶ್ನೆ ಕೇಳಬಹುದು. ಈ ವಿಚಾರ ತಮ್ಮ ಪಕ್ಷಕ್ಕೆ ಸಂಬಂಧಪಟ್ಟಿದ್ದು; ಕಾವು ತಮ್ಮ ಪಕ್ಷದ ರಾಷ್ಟ್ರಮಟ್ಟದ ಅಧ್ಯಕ್ಷರು ಎನ್ನುವ ವಿಚಾರ ನನಗೆ ಗೊತ್ತಿದೆ ಮತ್ತು ಅದರ ಅರಿವೂ ನನಗಿದೆ. ಆದರೆ ಮಾನ್ಯ ಸದಸ್ಯರೊಬ್ಬರು ನಿಯಮಗಳ ಪ್ರಕಾರ ಶುಭೆಯ ಕಾರ್ಯಕಲಾಪಗಳನ್ನು ನಡೆಸ ಬೇಕೆಂದು ಹೇಳಿದರೆ ಅದಕ್ಕೆ ನಾನು ತಲೆಬಾಗಬೇಕಾದ್ದು ನನ್ನ ಕರ್ತವ್ಯ. ಆದುದರಿಂದ, ನಿಯಮ ೬೩ರ ಪ್ರಕಾರ ಯಾವ ಯಾವ ಸದಸ್ಯರು ಸೂಚನೆ ಕಳುಹಿಸಿದ್ದಾರೆ ಅವರಿಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ಪಕ್ಷದ ರಾಷ್ಟ್ರ ಮಟ್ಟದ ಅಧ್ಯಕ್ಷರಾಗಿದ್ದಾರೆ. ಆದರೆ, ಅವರ ಪಕ್ಷದ ಉಪನಾಯಕರು ಈಗಾಗಲೇ ಪ್ರಸ್ತಾಪ ಮಾಡಿರುವುದರಿಂದ, ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆ ಕೊಟ್ಟ ಮೇಲೆ ಕೇಳತಕ್ಕ ವಿಚಾರವೇನಾದರೂ ಇದ್ದರೆ ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ನನಗೆ ಸ್ವಲ್ಪ ಅವಕಾಶ ಕೊಡಬೇಕು. ನಾನು ಆ ವಿಚಾರವಾಗಿ ಹೇಳುವುದಿಲ್ಲ.

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ. ತಕ್ಷಣಕ್ಕೆ ಆ ವಿಚಾರದಲ್ಲಿ ಪ್ರಸ್ತಾಪ ಬೇಡ. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಹೇಳಿಕೆ ಕೊಡಲಿಕ್ಕೆ ಕರೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ದಯವಿಟ್ಟು ಗಮನ ಸೆಳೆಯುವ ಸೂಚನೆ ಬಗ್ಗೆ.....

ಅಧ್ಯಕ್ಷರು.—ಏನಿದ್ದರೂ ನಂತರ ಪ್ರಸ್ತಾಪ ಮಾಡಿ. ಈಗ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಹೇಳುವುದನ್ನು ಸ್ವಲ್ಪ ಕೇಳಿ. ನಾನಿಂಗ ಒಂದೆರಡು ವಿಚಾರಗಳನ್ನು ಹೇಳಬೇಕಾಗುತ್ತದೆ. ಇದು ಬರೀ ಅವರ ಪಕ್ಷಕ್ಕೇ ಸಂಬಂಧಪಟ್ಟ ವಿಚಾರವಲ್ಲ.

ಅಧ್ಯಕ್ಷರು.—ಹಾಗೆಂದು ನಾನು ಭಾವಿಸಿಲ್ಲ. ಈ ಸದನದ ಯಾರೋ ಒಬ್ಬ

ಶ್ರೀ ಎಸ್. ಆರ್. ಬೊಮ್ಮಾಯಿ.—ಸಂಪ್ರದಾಯವಿದೆ.

ಅಧ್ಯಕ್ಷರು.—ಅದನ್ನು ನಾಳೆ ವಿಚಾರ ಮಾಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ನೋಟಿಸ್‌ಗೆ ರುಜು ಹಾಕಿರುವವರಿಗೆ ಮಾತ್ರ ಪ್ರಸ್ತಾಪ ಮಾಡಲು ಅವಕಾಶ ಕೊಡಬೇಕೆಂಬುದು ಸರಿಯಲ್ಲ.

ಅಧ್ಯಕ್ಷರು.—ಈ ಬಗ್ಗೆ ಮನೆಯ ಅಭಿಪ್ರಾಯವನ್ನು ನಾಳೆ ಪಡೆಮಕೊಂಡು ವಿಚಾರ ಮಾಡೋಣ. ಈ ನಿಮಿಷದಲ್ಲಿ ಅದನ್ನು ಪ್ರಸ್ತಾಪ ಮಾಡುವುದು ಬೇಡ. Supposing if I permit, the same thing will happen tomorrow. I have to be more considerate. Kindly bear with me. I have called the Hon'ble Chief Minister.

SRI C. M. ARUMUGHAM.—Sir, may I make a submission ?

MR. SPEAKER.—No; I have called the Chief Minister.

ಶ್ರೀ ಆರ್. ಗುಂಡೂರಾವ್ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನಾನು ನನ್ನ ಗಮನ ವನ್ನು ಸೆಳೆದಂಥ ವಿಚಾರಕ್ಕೆ ಉತ್ತರ ಕೊಟ್ಟಿದ್ದೇನೆ. ಅದರ ಮೇಲೆ ಮಾನ್ಯ ಸದಸ್ಯರು ಸ್ಪಷ್ಟೀಕರಣ ವೇನಾದರೂ ಇದ್ದರೆ ಕೇಳಬಹುದಿತ್ತು. ಆದರೆ, ಅದರ ಬದಲು ಅವರು ದೊಡ್ಡ ಭಾಷಣವನ್ನೇ ಮಾಡಿ ಬಿಟ್ಟರು. ಇದೇ ದುರ್ದೈವದ ಸಂಗತಿ. ಹಾಗಲ್ಲ ಹೀಗೆ ಎಂದು ಸ್ಪಷ್ಟೀಕರಣವನ್ನು ಅವರು ಕೇಳಿದ್ದರೆ ಪರವಾಗಿರಲಿಲ್ಲ. ಸ್ಪಷ್ಟೀಕರಣವನ್ನು ಕೇಳಬೇಕಾದರೆ, ಅದು ಯಾವ ಸಂದರ್ಭದಲ್ಲಾಯಿತು ; ಯಾವ ಸಮಯದಲ್ಲಾಯಿತು; ಅದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ; ಅಥವಾ ತಮ್ಮ ಹತ್ತಿರವಿರುವ ಮಾಹಿತಿ ಸರಿ ಇಲ್ಲ ; ನಮ್ಮ ಹತ್ತಿರ ಈ ರೀತಿಯಾದ ಮಾಹಿತಿ ಇದೆ ಎಂದು ಕೇಳಬೇಕು. ಅದು ಬಿಟ್ಟು, ಶ್ರವಣಬೆಳಗೊಳದಲ್ಲಿ ಹೀಗೆ ಭಾಷಣ ಮಾಡಿದ್ದಾರೆ; ತಿರುಪತಿಯಲ್ಲಿ ಹೀಗೆ ಭಾಷಣ ಮಾಡಿದ್ದಾರೆ; ಧರ್ಮ ಸ್ಥಳದಲ್ಲಿ ಹೀಗೆ ಹೇಳಿದ್ದಾರೆ ಎಂದು ಹೇಳುವುದು ನೀತಿ ಹೇಳುವವರ ಮಾತು. ನಡೆದಿರುವ ವಿಷಯವನ್ನು ಸರ್ಕಾರ ಅವರ ಮುಂದೆ. ಇಟ್ಟಿದೆ. ಕಾನೂನು ಪ್ರಕಾರ ಕ್ರಮ ಕೈಗೊಂಡಿದೆ. ಜಿಂದಾಬಾದ್ ಕೂಗುತ್ತಾರೆ ಎಲ್ಲರೂ ಕೂಗುತ್ತಾರೆ. ಆಗುವವರೂ ಕೂಗುತ್ತಾರೆ ; ಆಗದೇ ಇರುವವರೂ ಕೂಗುತ್ತಾರೆ. ಇವತ್ತು ನಮಗೆ ಜಿಂದಾಬಾದ್ ಎಂದು ಕೂಗುತ್ತಾರೆ; ನಾಳೆ ಇನ್ನೊಬ್ಬರಿಗೆ ಕೂಗುತ್ತಾರೆ. ಆ ಪ್ರಶ್ನೆ ಇಲ್ಲಿ ಉದ್ಭವ ವಾಗುವುದಿಲ್ಲ. ಈಗ ಉದ್ಭವವಾಗಿರುವ ಪ್ರಶ್ನೆ ಏನೆಂದರೆ, ಚಾಮುಂಡೇಶ್ವರಿ ಟ್ರಸ್ಟ್‌ಗೆ ಕೊಟ್ಟಂಥ ಜಾಗ ದಲ್ಲಿ ಮೈಕೋ ಕಾರ್ಖಾನೆಯ ನೌಕರರ ಒಂದು ಸಭೆ ನಡೆಯುತ್ತಿತ್ತು. ಸರ್ಕಾರಕ್ಕೆ ಎಲ್ಲಾ ಪಕ್ಷಗಳೂ ಒಂದೇ. ಸರ್ಕಾರಕ್ಕೆ ಕಮ್ಯೂನಿಸ್ಟ್ ಒಂದೇ; ಆರ್ಮುಗಂ ಅವರ ಪಕ್ಷವೂ ಒಂದೇ. ಎಲ್ಲಾ ಪಕ್ಷಗಳೂ ಒಂದೇ. ಯುವಕ ಕಾಂಗ್ರೆಸ್ (ಐ) ನವರು ಆ ಜಾಗ ನಮಗೆ ಸೇರಿದ್ದೆಂದು ಹೇಳಿಕೊಂಡು ಮೈಕೋ ಕಾರ್ಮಿಕರ ಸಂಘದ ಮಹಾ ಸಭೆಯು ನಡೆಯುತ್ತಿದ್ದ ಜಾಗಕ್ಕೆ ಹೋಗಿದ್ದಾರೆ. ಹೋದಮೇಲೆ ಅಲ್ಲಿ ಅಶಾಂತಿ ವಾತಾವರಣ ಉಂಟಾಗಿದೆ. ಉಂಟಾದ ಮೇಲೆ ಪೋಲಿಸರು ಅಲ್ಲಿಗೆ ಹೋಗಿದ್ದಾರೆ. ಆಗ, ಇದು ನಮ್ಮ ಪಕ್ಷದ ಕಛೇರಿ ಎಂದು ಒಬ್ಬರು; ಇದು ನಮ್ಮ ಪಕ್ಷದ ಕಛೇರಿ ಎಂದು ಮತ್ತೊಬ್ಬರು ಅವರಿಗೆ ಹೇಳಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಅಲ್ಲಿ ಸಭೆ ನಡೆಸುವುದಕ್ಕೆ ಅವಕಾಶ ಕೊಟ್ಟರೆ ಅಶಾಂತಿ ವಾತಾವರಣ ಉಂಟಾಗುತ್ತದೆಂದು ತಿಳಿದು, ಎರಡೂ ಕಡೆಯವರನ್ನು ಹೊರಗಡೆಗೆ ಕಳುಹಿಸಿ, ಕಾನೂನು ಪ್ರಕಾರ ಏನು ಕ್ರಮ ಕೈಕೊಳ್ಳಬೇಕೋ ಅದನ್ನು ಕೈಗೊಂಡಿದ್ದಾರೆ. ಯಾರು ಯಾರು ಪೋಲಿಸ್ ಠಾಣೆ ಯಲ್ಲಿ ದೂರು ಕೊಟ್ಟಿದ್ದಾರೆ ಅವನ್ನೆಲ್ಲ ರಿಜಿಸ್ಟರ್ ಮಾಡಿಕೊಂಡು ತನಿಖೆ ಮಾಡುತ್ತಿದ್ದಾರೆ. ಅದನ್ನು ನಾನು ಹೇಳಿದ್ದೇನೆ. ಆದರೆ, ಗಮನ ಸೆಳೆದವರ ದೃಷ್ಟಿಯಲ್ಲಿ ಪೋಲಿಸರು ಒಂದೇ ಪಕ್ಷದವರಿಗೆ ಸಹಾಯ ಮಾಡಿದ್ದಾರೆಂದರೆ, ಅದು ಬೇರೆ ವಿಷಯ. ಸದ್ಯಕ್ಕೆ, ಶಾಂತಿ ನಲೆಸುವುದಕ್ಕೆ ಮತ್ತು ಯಾವುದೇ ರೀತಿಯ ಗಲಾಟೆಗೆ ಆಸ್ಪದ ಇಲ್ಲದಂತೆ ಮಾಡಲು, ಆ ಜಾಗ ಯಾರಿಗೆ ಸೇರಬೇಕು ಮತ್ತು ಯಾರಿಗೆ ಸೇರಬಾರ ದೆನ್ನುವ ಪ್ರಶ್ನೆ ಬಂದಾಗ ಅವರು ಕಾನೂನಿನ ಪ್ರಕಾರ ಕ್ರಮ ಕೈಗೊಂಡಿದ್ದಾರೆ. ತಹಶೀಲ್ದಾರರೂ ಕೂಡ. ಈ ಜಾಗ ತಮ್ಮದೆಂದು ಮತ್ತೊಬ್ಬರು ಬರುವುದು ; ನಾಳೆ ಇನ್ನೊಬ್ಬರು ಬರುವುದು; ಇದರಿಂದ ಗಲಾಟೆಯಾಗಬಾರದೆಂಬ ದೃಷ್ಟಿಯಿಂದ ಕೂಡಲೇ ೧೪೪ ಸೆಕ್ಷನ್ ಪ್ರಕಾರ ಕ್ರಮ ಕೈಗೊಂಡಿದ್ದಾರೆ. ಅದರ ಮೇಲೆ ನ್ಯಾಯಾಲಯಕ್ಕೆ ಯಾರು ಬೇಕಾದರೂ ಹೋಗಬಹುದು ; ತೀರ್ಮಾನ ತೆಗೆದುಕೊಳ್ಳಬಹುದು. ನ್ಯಾಯಾಲಯ ಇಂತಹವರಿಗೆ ಆ ಜಾಗ ಸೇರಿದ್ದೆಂದು ಆದೇಶ ನೀಡಿದರೆ ಅದನ್ನು ಉಲ್ಲಂಘನೆ ಮಾಡ ಬೇಕೆಂದು ಸರ್ಕಾರದ ಉದ್ದೇಶವಿಲ್ಲ ಆದುದರಿಂದ ಇಷ್ಟನ್ನು ಹೇಳುವುದು ಬಿಟ್ಟು, ಇಷ್ಟೆಲ್ಲಾ ಉದ್ಭವ ವಾಗಿರುವುದು ಆದರಿಂದ..... ಎಂದು ಹೇಳುವುದು ಸರಿಯಲ್ಲ. ನಿಯಮ ೬೩ ಯಾವಾಗ ಸೀಮಿತ ವಾಗಿರುತ್ತದೆ ? ಯಾವಾಗ ರಾಜಕೀಯವನ್ನು ತಂದು ಇದರಲ್ಲಿ ಬೆರೆಸುತ್ತಾರೆ ಆಗ ಈ ಸಮಸ್ಯೆಗಳು ಬರುತ್ತವೆ. ಹೇಳುವುದಕ್ಕೆ ಒಬ್ಬರಿಗೇ ಹಕ್ಕಿಲ್ಲ. ಎಲ್ಲರಿಗೂ ಹಕ್ಕಿದೆ. ತಾವು ಹೇಳುವಾಗ, ತಮ್ಮದೇ ಸರಿ; ಬಾಕಿಯವರು ಹೇಳುವುದು ಅಪ್ರಸ್ತುತವಾಗಿರುವುದಿಲ್ಲ ಎಂದು ಭಾವಿಸುವುದೇಕ್ಕೆ ? ಶಾಂತಿ ಸಮಾ ಧಾನ ಮಾಡಬೇಕೆಂದು ಹೇಳುವವರು ಮೊದಲು ಶಾಂತಿ ಸಮಾಧಾನ ಇಟ್ಟುಕೊಂಡಿದ್ದರೆ ಈ ಪ್ರಶ್ನೆ ಗಳೆಲ್ಲಾ ಉದ್ಭವಿಸುತ್ತಿರಲಿಲ್ಲ. ಕಾನೂನಿನಲ್ಲಿ ಹೆಚ್ಚು ಕಡಿಮೆ ಇದ್ದರೆ, ಹೇಳಿ, ಸರಿ ಮಾಡೋಣ. ಅಥವಾ ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳೋಣ. ವಿಷಯವನ್ನು ಅಷ್ಟಕ್ಕೇ ಸೀಮಿತಗೊಳಿಸಿ ರಾಜಕೀಯ ಬೆರಸದೆ ಮಾತನಾಡಿದ್ದರೆ. ಇನ್ನೊಂದು ರಾಜಕೀಯ ಪಕ್ಷದವರೂ ಮಾತನಾಡಬಹು ದಾಗಿತ್ತು. ಇದೇ ಪ್ರಶ್ನೆ ಪರಿಷತ್ತಿನಲ್ಲಿ ಬಂತು ಅಲ್ಲಿ, ದೇಶದಲ್ಲೆಲ್ಲೋ ಆಗದೆ ಇರುವುದು ಆಗಿ ಹೋಗಿದೆ ಎನ್ನುವ ರೀತಿಯಲ್ಲಿ ಮಾತನಾಡಿದರು. ಇಂತಹ ಘಟನೆಗಳು ದೇಶದಲ್ಲಿ ಬೇಕಾದಷ್ಟು ನಡೆಯು ತ್ತಿವೆ. ಆದರೆ, ಸರ್ಕಾರ ನಮಗೆ ರಕ್ಷಣೆ ಕೊಟ್ಟಿಲ್ಲವೆಂದು ಮಾನ್ಯ ಕಕ್ಕಿಲಾಯ ಅವರು ಹೇಳುವುದು ಸರಿಯಲ್ಲ ಸರ್ಕಾರಕ್ಕೆ ಇಲ್ಲಿ ಏನು ಸಂಬಂಧವಿದೆ ? ನಮ್ಮ ಪಕ್ಷದವರು ಸಭೆ ಮಾಡುವುದಾದರೆ ರಕ್ಷಣೆ

ಕೊಡುತ್ತೇವೆ, ಇನ್ನೊಬ್ಬರ ಪಕ್ಷದ ಸಭೆ ನಡೆಸುವುದಾದರೆ ರಕ್ಷಣೆ ಕೊಡುತ್ತೇವೆ. ಮಾನ್ಯ ಗಂಗಾಧರನ್ ಅವರು ಬಂದು, ಶ್ರೀ ವಾಜಪೇಯಿಯವರು ಭಾಷಣ ಮಾಡುತ್ತಾರೆಂದು ಹೇಳಿದರೆ, ಪೋಲಿಸರು ರಕ್ಷಣೆ ಕೊಡುವುದಿಲ್ಲವೇನು ?

4-00 P. M.

Unfortunately you are mixing the issues always. When you mix the issues, all people will speak. Naturally they will speak. Don't think that it is confined to yourself only and you are only experts in speaking. The other party is also equally compete to speak about politics if you want to speak politics. If you want to confine to the issue only, we are for it. As the Chief Minister, I am here to give protection and I am here to take necessary actions. But if you mix politics in this, we are ready. I am also a political man. I am not a Chief Minister nominated by some body.

AN HON. MEMBER.—Chain & knives....

SRI R. GUNDU RAO.—We have seen who have introduced this chain and knives. All those things are not necessary here now. The whole State knows it. Sri Kakkilaya and his other party Members know. I am not going to give the details. Because you have raised the issue, I am telling. We are the last persons to encourage this. Let me make it very clear in this August House. Let me tell Sri J. H. Patel, I am the last person to encourage such persons who use chains and knives. Those days have gone and they will never come again in Karnataka. Let me tell you ಕರ್ನಾಟಕ ಜನತೆಗೆ, ದೇಶದ ಜನತೆಗೆ ಗೊತ್ತಿದೆ, ಇದಕ್ಕೆ ಮೂಲ ಯಾರು ಎನ್ನುವುದು ಗೊತ್ತಿದೆ. ಅದನ್ನು ನನ್ನ ಬಾಯಲ್ಲಿ ಏತಕ್ಕೆ ಬರುವಂತೆ ಮಾಡುತ್ತೀರಿ. ಶ್ರೀನಿವಾಸ್ ರವರಿಗೂ ಗೊತ್ತಿದೆ.

ಶ್ರೀ ಜಯದೇವರಾಜ್ ಅರಸ್.—ಸ್ವಾಮಿ, ತಾವು ನಿನ್ನೆ ಕಥೆ ಹೇಳಿ ?

ಶ್ರೀ ಆರ್. ಗುಂಡೂರಾವ್.—ನಾನು ಶೆ ನಿಮಿಷದಲ್ಲಿ ಮುಗಿಸಿ, ಕೂತುಕೊಂಡು. ನೀವು ಉಪ ಕಥೆ ಹೇಳುವುದನ್ನು ಕೇಳಿ ಕೊಂಡು ಹೋಗುವುದಕ್ಕೆ ಬಂದಿದ್ದೇನೆಯೆ ? ನಿಮ್ಮ ನಾಯಕತ್ವದಲ್ಲಿ ಮೈಸೂರಿನಲ್ಲಿದ್ದ ಆಫೀಸ್ ಮಾಡಲಿಲ್ಲವೆ ?

ಶ್ರೀ ಜಯದೇವರಾಜ ಅರಸ್.—ನೀವು ಮಾಡಿದಹಾಗೆ ನಾವು ಮಾಡಲಿಲ್ಲ.

ಶ್ರೀ ಆರ್. ಗುಂಡೂರಾವ್.—ನಿಮ್ಮನ್ನು ಮೈಸೂರಿನಲ್ಲಿ ಎಲ್ಲಾ ಕಂಡಿದ್ದಾರೆ. ಕೆ. ಪುಟ್ಟಸ್ವಾಮಿ ಮಂತ್ರಿಯಾಗಿದ್ದವರನ್ನು ಓಡಿಸಿದಿರಿ.

ಶ್ರೀ ಜಯದೇವರಾಜ ಅರಸ್. —ಹಳೇ ಕಥೆ ಹೇಳಬೇಡಿ.

ಶ್ರೀ ಆರ್. ಗುಂಡೂರಾವ್.— ಹಳೇ ಕಥೆ ಏನೂ ಅಲ್ಲ. ದೇಶದ ಜನರ ಬಗ್ಗೆ ಆಕಾಂಕ್ಷೆ ಇರತಕ್ಕ ಪ್ರಶ್ನೆ ಅಲ್ಲ. ಇದರಿಂದ ದೇಶವಲ್ಲಿ ಅನಾಹುತ ಏನೂ ಆಗಿಲ್ಲ. ಇದು ರಾಜಕೀಯ ಪಕ್ಷಗಳ ಪ್ರಶ್ನೆ ಇರಬಹುದು. ಶಾಂತಿ ಪರಿಪಾಲನೆ ಮಾಡುವ ದೃಷ್ಟಿ ಯಿಂದ ಸರ್ಕಾರ ಕಾನೂನು ಪ್ರಕಾರ ಕ್ರಮ ಕೈಗೊಂಡು ತನ್ನ ಕರ್ತವ್ಯವನ್ನು ಮಾಡಿದೆ ನಾನು ತಗಲೇ ಹೇಳಿದ ಹಾಗೆ ೧೪ಜಿನೇ ಸೆಕ್ಷನ್ ಹಾಕಿ ತಹಶೀಲ್ದಾರ್‌ರವರಿಗೆ ಅಟಾಚ್ ಮಾಡಿದ್ದೇವೆ. ಪರಿಸ್ಥಿತಿ ಈಗ ಶಾಂತವಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದರೆ, ನಾನು ಕೂಡ ಈ ಸಭೆಯ ನಾಯಕನಾಗಿ ಮಾತನಾಡುವುದಕ್ಕೆ ಅಧಿಕಾರ ಇದೆ. ಮಾತನಾಡುತ್ತೇನೆ. ಈ ವಿಷಯವನ್ನು ಇಲ್ಲಿ ತಂದಿರುವವರು ಜೆ.ಹೆಚ್. ಪಟೇಲರು

ಇದರಲ್ಲಿ ಯಾವರೀತಿಯ ಬೇಧ ಭಾವ ಕಂಡಿಲ್ಲ, ಸರ್ಕಾರ ಎಲ್ಲ ಕ್ರಮವನ್ನು ಕಾನೂನುಪ್ರಕಾರ ಕೈಗೊಂಡಿದೆ. ಇದರಲ್ಲಿ ಆ ಪಕ್ಷ ಈ ಪಕ್ಷ ಎಂದು ನೋಡುವುದೇನೂ ಇಲ್ಲ. ಇಷ್ಟನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೆಖೀರ್.—ಸ್ವಾಮಿ, ನನಗೆ ಎರಡು ನಿಮಿಷ ಮಾತನಾಡುವುದಕ್ಕೆ ಅವ ಕಾಶ ಕೊಡಿ.

ಶ್ರೀ ಮಳ್ಳೂರು ಆನಂದರಾವ್.—ಸ್ವಾಮಿ, ನನಗೂ ಎರಡು ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವ ಕಾಶ ಕೊಡಬೇಕು.

MR. SPEAKER.—I had promised the Leader of the Opposition that I will allow him to speak after the reply by the Leader of the House.

SRI D. DEVARAJ URS.—If he wants to speak.

ಶ್ರೀ ಮಳ್ಳೂರು ಆನಂದರಾವ್.—ಎರಡು ಮಾತ್ರ ಕ್ಲಾರಿಫಿಕೇಷನ್ ಕೇಳುತ್ತೇನೆ.

SRI S. M. SHEERNALY CHANDRASEKHAR.—I have got every right to speak.

(INTERRUPTION)

SRI D. DEVARAJ URS.—Two points have arisen out of what the Chief Minister...

MR. SPEAKER.—I don't tolerate these gestures of hon. Member Chandrasekhar. You have no right to say. Please hear me. You cannot show those gestures. Will the Chief Whip please advise the Hon. Member ?

ಶ್ರೀ ಡಿ. ಭಾಸ್ಕರ ರಟ್ಟಿ.—ತಾವು ಏತಕ್ಕೆ ಕೋಪ ಮಾಡಿಕೊಳ್ಳುತ್ತೀರಿ ?

ಅಧ್ಯಕ್ಷರು.—ದಯವಿಟ್ಟು ಕೇಳಿ, ಯಾವುದೇ ಕಾರಣದಿಂದ ಸದಸ್ಯರು ತಮ್ಮ ಮನಸ್ಸಿನ ಚಿತ್ತವನ್ನು ಕಳೆದು ಕೊಳ್ಳತಕ್ಕಂಥಾದ್ದು ಸರಿಯಲ್ಲ. ಈ ರೀತಿ ಪ್ರಶ್ನೆ ಮಾಡತಕ್ಕದ್ದು ಸರಿಯಲ್ಲ. ಕೈ ತೋರಿಸುವುದು ಸರಿಯಲ್ಲ.

ಶ್ರೀ ಮಳ್ಳೂರು ಆನಂದರಾವ್.—ತಾವು ಇಷ್ಟು ದಿವಸ ನಗುತ್ತಾ, ನಗುತ್ತಾ ಇದ್ದಿರಿ ಇವತ್ತು ಏತಕ್ಕೆ ಕೋಪ ಮಾಡಿಕೊಳ್ಳುತ್ತೀರಿ ?

SRI D. DEVARAJ URS.—I think Hon. Member will allow me now.

MR. SPEAKER.—He has allowed. Please speak.

SRI MALLUR ANANDARAO.—The Chair has allowed.

SRI D. DEVARAJ URS.—The Chair has allowed but...

SRI MALLUR ANANDARAO.—At the same time the Chair has promised me to put clarifications.

MR. SPEAKER.—Please don't take it.

SRI D. DEVARAJ URS.—Sir, the points that arise out of the statementas read wel as the Statement just now made by the Chief

Minister as a Leader of the House, here, are mainly two. Breach of peace. There was a breach of peace because of a meeting held and there were some disturbances. So, these disturbances, the police thought, would cause breach of peace. Another reason for this apprehension by the police was not merely the group rivalry that was expected, supposed to have been expected, at the time of that MICO Workers' meeting but a gronp of calling themselves Congress I, claimed that the premises or the area or the office belongs to them. Likewise, they have given a Statement. Mr. George's statement is there.

MR. SPEAKER.—Hon. Member Sri K. H. Srinivas has already referred to that.

SRI D. DEVARAJ URS.—I am just mentioning. His name is there. He belongs to Congress-I. And subsequently whether he has disowned or not, I am not aware. But the Statement he read in Kannada Prabha, is his own. It is not somebody else's. He himself has given the Statement. Now, under this belief that there is likelyhood of breach of peace and they want to maintain peace there and two groups are claiming, they have referred the matter under Section 145/146. An order has been promulgated by the Magistrate and both of us are asked not to enter that area or office. So, I would like to know, is this really the way to maintain law and order or prevent breach of peace? It amounts to this: Supposing, I go to somebody's house tomorrow and call it mine and I am a stronger party and they are not able to throw me out, there is likely hood of breach of peace. So, close the door and throw both of them out till you finally settle whether the House belongs to the person who stays there or the person who has just now entered. It amounts to that. Now the Chief Minister says, of course, let us believe him when he says that he is not in the know of anything of these things and that official report has come to him. Accordingly, he says that Police have taken action in accordance with the law. I remember a story now, it is not a big story. Just now I remembered it because it very well appropriately fits in o the situation. ಅದು ಹೀಗಿದೆ, ಗಂಡ ಹೆಂಡತಿ ಇಬ್ಬರೂ ಇದ್ದರು, ಅವರು ಒಂದು ಊರಿಗೆ ಹೋಗಬೇಕಾಗಿದ್ದರಿಂದ ಹೋಗೋಣಪೆಂದು ಹೊರಟರು. ಅವರು ಆ ಊರಿನ ಹತ್ತಿರ ಬಂದಾಗ ಊರ ಮುಂದೆ ಒಬ್ಬ ಕುರುಡ ಕುಳಿತು ಕೊಂಡಿದ್ದ. ಕುರುಡನು ಗಂಡ ಹೆಂಡತಿ ಆತನ ಪಕ್ಕದಲ್ಲಿ ಹಾದು ಹೋಗುವಾಗ ಕುಳಂಡನು ಅತಿ ವಿನಯದಿಂದ ಯಾರಪ್ಪ ಅಲ್ಲಿ ಹೋಗುವವರು ದಯವಿಟ್ಟು ನನ್ನನ್ನು ಊರ ಮಧ್ಯದಲ್ಲಿ ಕರೆದುಕೊಂಡು ಹೋಗಿ ಬಿಡಿ ಎಂದು ಕೇಳಿಕೊಂಡ. ಗಂಡ ಹೆಂಡತಿ ಅಯ್ಯೋ ಪಾಪ ಕುರುಡ ಅವನನ್ನು ಊರ ಮಧ್ಯದಲ್ಲಿ ಬಿಟ್ಟರೆ ಭಿಕ್ಷೆ ಯನ್ನಾದರೂ ಬೇಡಿಕೊಂಡು ತಿನ್ನುತ್ತಾನೆಂದು ಯೋಚಿಸಿ, ಕುರುಡನನ್ನು ಕೈಹಿಡಿದು ನಡೆಸಿಕೊಂಡು ಬಾ ಎಂದು ಗಂಡ ಹೆಂಡತಿಗೆ ಹೇಳಿದ. ಆಕೆ ಗಂಡ ಹೇಳಿದ ಮಾತಿನಂತೆ ಕುರುಡನನ್ನು ಕೈಹಿಡಿದುಕೊಂಡು ಊರ ಒಳಗಡೆ ಹೊರಟರು. ಊರ ಮಧ್ಯದೊಳಗೆ ಬರುತ್ತಲೇ ಕುರುಡ ಇದ್ದಕ್ಕಿದ್ದಹಾಗೆ ಲಭ ಲಭ ಎಂದು ಬಾಯಿ ಬಡಿದುಕೊಂಡು ಬಿಟ್ಟ. ಅಷ್ಟರಲ್ಲಿ ಊರ ಜನರೆಲ್ಲಾ ಸೇರಿದಕೊಂಡುಬಿಟ್ಟರು. ಏನು, ಏನು

ಎಂದು ಕೇಳುವಾಗಲೇ ಕುರುಡ ಆಕೆ ಗಂಡನ ಕಡೆ ಕೈ ತೋರಿಸಿ ನೋಡಿ ನನ್ನ ಹೆಂಡತಿಯನ್ನು ಕರೆದು ಕೊಂಡು ಹೋಗುತ್ತಿದ್ದಾನೆ. ನಾನು ಕುರುಡ ಎಂದು ಕೂಗಾಡಿಕೊಂಡ ಜನಗಳು ಆಕೆಯ ಗಂಡನನ್ನು ಚೆನ್ನಾಗಿ ಥಳಿಸಿ ಕುರುಡನ ಜೊತೆ ಹೆಂಡತಿಯನ್ನು ಕಳುಹಿಸಿ ಬಿಟ್ಟರು. ಪಾಪ ಕುರುಡ ಎಂದು ಕೈಹಿಡಿದು ಕರೆದುಕೊಂಡುಬಂದಿದ್ದು ತಪ್ಪೆ ? ನಮ್ಮ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಹೇಳಿದ್ದಾರೆ. ಕಾನೂನು ಮುರಿಯುತ್ತಿದ್ದರೂ ಪೋಲೀಸಿನವರು ಅಲ್ಲಿಗೆ ಹೋದರು, ಇಲ್ಲಿ ಏತಕ್ಕೆ ಸೇರಿಕೊಂಡಿರಿ ಎಂದು ಅನುಮಾನ ಬಂದು ಬಿಟ್ಟಿತು. Suddenly, they begin to doubt as if this entire police is coming afresh only yesterday or two days back to Bangalore City.

No less a person than the Chief Minister himself who is also the Home Minister knows this as a matter of fact; he himself mentioned that it was given by the Government and it has gone to the High Court and it has stayed. What is the meaning of 'stay'. Stay means it is remaining with us with the Trust to which it was given by the Government. Until some final d cision is taken, who will have the possession and enjoyment of it ? No, how can the Chief Minister say that the police with a veiw to maintain law and order or give protection have seized or they have recommended for the seizure by the Magistrate ? To day they have locked it up and prevented our partymen going there. Its this the way to maintain law and order ? Is this the way to give protection ? Knowing fully well that it is in our possession tomorrow if the High Court decides in some other fashion then it is a different matter. Then I could say we are still continuing. They may go to the court of law. Even then they cannot beat us and threaten us to send out. The court order will have to be carried out. Under these circumstances, have the police I would like to know through the Chief Minister as well as the Home Minister, made any effort, taken any pain to find out to whom this premises as well as the office building belongs to ? Did they find out whether the persons who came yesterday and started complaining that it belongs to them ? Did they make any efforts, I want to know ? Without making any effort to verify whether as to who should be in possession or who was not in possession just before the seize, they have recommended to the Magistrate for seizure because of the breach of peace. Naturally the Police sent report that there is likelyhood of breach of peace and Magistrate passed order like this. This is called impartiality. This is the way every political party is looked upon. Therefore, Sir, I am really very sorry that the police action I do not say it is high handed, it is completely hundred percent partial and the Home Minister, who also happens to be the Ceief Minister should have looked into this aspect before telling us what he is likely to do. On the other hand, he is pleased to say that the Police have acted according to law. I am sorry, I cannot approve of what the Chief Minister says; it is

not in accordance with the law but it is in aocordance with the dictation given by the people who belong to the ruling party. I do not say it is the Chief Minister because there are other influences. Other influences might hav· played other wise such a thing could not have happened. Under these circumstances I am afraid as a political party in the opposition it becomes very difficult for us to function. The Chief Minister often and on says that there is no opposition in the State. Perhaps his idea is that the opposition should be smashed completely. But anyway whether he succeeds or not is another matter. I am sorry we cannot tolerate this typy of treatment that has been meted out by the Government and in a given situation like this, Government who is responsible for the police to take such high handed action have recommended for the seizure of our office by the Magistrate and the law can keep. . Under these circumstance I wish to stage a walk out in protest agains twhat the Government have done.

(*Congress Umembers withdrew from the House*)

(*From the Visitors' Gallery hand bills were th own*)

SRI MICHAEL B. FERNANDES.—Mr, Speaker Sir,.....

MR. SPEAKER.—Nothing will go on record.

SRI MICHAEL B. FERNANDES.—I am also staging walk out.

(*Sri M. B. Fernandes withdrew from the Hoese*)

SRI B. B. SAYANAK.—Sir, pamphlets were thrown from the Gallery. This is a very sevious matter.

MR. SPEAKER.—Action will be taken against those people and action will also be taken against persons who have signed the passes.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಅಧ್ಯಕ್ಷರೆ, ತಮ್ಮ ಮುಖಾಂತರ ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಎರಡೂ ಕ್ಲಾರಿಫಿಕೇಷನ್ ಕೇಳಲಿಕ್ಕೆ ಅವಕಾಶ ಕೊಡಬೇಕು.

MR. SPEAKER.—That is over.

(ಗೊಂದಲ)

SRI S. M. SHEERNALY CHANDRASHEKHAR.—How can it be over?

ಅಧ್ಯಕ್ಷರು.—ಅವರು ವಾಕೌಟ್ ಮಾಡಿದ್ದಾರೆ.

(INTERRUPTIONS)

ಶ್ರೀ ಎಸ್.ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಈ ವಿಚಾರದಲ್ಲಿ ಬೇರೆ ಪಕ್ಷದವರು ಮಾತನಾಡಲಿಕ್ಕೆ ಅವಕಾಶ ಕೊಡದೆ ಹೋದರೆ ಅಪಾರ್ಥವಾಗುತ್ತದೆ. ಪಕ್ಷಗಳ ಕಾರ್ಯದಲ್ಲಿ ಇದು ಮಹತ್ವವಾದ ವಿಚಾರ. ಆದ್ದರಿಂದ, ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ನಾನು ಇವೊತ್ತಿಗೆ ಎಂದು ಹೇಳಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ಇದರಿಂದ ಏನಾಗುತ್ತದೆ ಎಂದರೆ, ರಾಜಕೀಯ ಪಕ್ಷದ ಕಾರ್ಯಾಚರಣೆಯ ಬಗ್ಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕ ಈ ಮನೆಯಲ್ಲಿ ಇದರ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಇಲ್ಲ ಎಂದರೆ ಅಪಾರ್ಥವಾಗುತ್ತದೆ. ಆ ಕಡೆಯವರಿಗೂ ಅವಕಾಶ ಕೊಡಿ, ಈ ಕಡೆಯವರಿಗೂ ಅವಕಾಶ ಕೊಡಿ. ತಾವು ಸಮಯದ ಮಿತಿಯನ್ನು ಹಾಕಿ ಇಲ್ಲದಿದ್ದರೆ ಏನಾಗುತ್ತದೆ ಎಂದರೆ.....

ಅಧ್ಯಕ್ಷರು.—ತಾವು ಮೊದಲಿನಿಂದಲೂ ಇರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೆ, ನಾನು ಮೊದಲಿನಿಂದಲೂ ಇದ್ದೇನೆ. ತಾವು ಕನ್‌ವೆನ್‌ಷನ್ ಪ್ರಕಾರ ಅವಕಾಶ ಮಾಡಿಕೊಡಬೇಕು. ಅದು ಸತ್‌ಸಂಪ್ರದಾಯ. ಇವೊತ್ತು ನಾನು ಜನತಾ ಪಕ್ಷದ ನಾಯಕನಾಗಿ ನನ್ನ ಅಭಿಪ್ರಾಯವನ್ನು ವ್ಯಕ್ತ ಮಾಡದೇ ಹೋದರೆ ನನ್ನ ಕರ್ತವ್ಯ ಚ್ಯುತಿಯಾಗುತ್ತದೆ. ಇಂತಹ ಮಹತ್ವ ವಿಚಾರಗಳು ಬಂದಾಗ ಅವಕಾಶ ಮಾಡಿಕೊಡುವುದು ಸತ್‌ಸಂಪ್ರದಾಯ. ಮಾನ್ಯ ಅಧ್ಯಕ್ಷರು ದಯವಿಟ್ಟು ಅವಕಾಶ ಮಾಡಿಕೊಡಬೇಕು. ಸಮಯದ ಬಗ್ಗೆ ಒಂದು ಮಿತಿಯಲ್ಲಿಟ್ಟು ಮಾಡೋಣ.

ಶ್ರೀ ವೈ. ರಾಮಕೃಷ್ಣ.—ಹಿಂದೆ ಮಾಡಿರಲಿಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನು ಹೇಳುತ್ತೇನೆ.

(ಗೊಂದಲ)

MR. SPEAKER.—Hon. Member Sri Chandrashekhar is very much agitated. I want to know from him what he wants to say

SRI K. BHASKAR NAIDU.—Adjourn for 15 minutes. We will have tea and come back.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಅಧ್ಯಕ್ಷರೆ, ನಾನು ಎರಡು ಕ್ಲಾರಿಫಿಕೇಷನ್ ಮಾತ್ರ ಕೇಳುತ್ತೇನೆ ಎಂದರೂ ತಾವು ಅವಕಾಶ ಕೊಡುವುದಿಲ್ಲ ಎಂದರೆ ಹೇಗೆ ?

MR. SPEAKER.—You are making the whole case worse.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರಾದ ದೇವರಾಜ್ ಅರಸ್ ಅವರು ಮಾತನಾಡಿದ ಮೇಲೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೀರಿ.

(ಗೊಂದಲ)

MR. SPEAKER.—Don't raise that That Calling Attention matter is over.

ಶ್ರೀ ವೈ. ರಾಮಕೃಷ್ಣ.—ಅಧ್ಯಕ್ಷರೇ, ಈಗಾಗಲೇ ತಾವು ವಿರೋಧ ಪಕ್ಷದ ನಾಯಕರಿಗೆ ಅವಕಾಶ ಕೊಟ್ಟಿದ್ದೀರಿ. ಈಗ ಮಾನ್ಯ ಸದಸ್ಯರಾದ ಶೀರನಾಳಿ ಚಂದ್ರಶೇಖರ್ ಅವರು ಒಂದು ನಿಮಿಷ ಕೇಳಿದ್ದಾರೆ ಅವಕಾಶ ಕೊಡಿ.

(ಗೊಂದಲ)

MR. SPEAKER.—That has gone into the records and he has made the position quite clear. ಅವರು ವಾಕ್‌ಔಟ್ ಮಾಡಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ಅಧ್ಯಕ್ಷರೆ, ಅವರಿಗೆ ಅವಕಾಶ ಕೊಟ್ಟಿದ್ದೀರಿ. ಇವರಿಗೂ ಕೂಡ ಅವಕಾಶ ಕೊಡಿ ಎಂದು ಕೇಳಿದೆ.

ಶ್ರೀ ಹೆಚ್. ಗಂಗಾಧರಸ್.—ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶೀರನಾಳಿ ಚಂದ್ರಶೇಖರ್ ಅವರು ಒಂದು ನಿಮಿಷ ಏನು ಹೇಳುತ್ತಾರೆ ಹೇಳಲಿ ಬಿಡಿ.

(ಗೊಂದಲ)

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಅಧ್ಯಕ್ಷರೆ, ಈ ವಿಷಯ ಇದೆಯೋ, ಇಲ್ಲವೋ, ಹೇಳಬೇಕು. ಇದು ಬಹಳ ಸೂಕ್ಷ್ಮವಾದ ವಿಚಾರ.

(ಗೊಂದಲ)

MR. SPEAKER.—We can adjourn for 10 minutes.

(The House adjourned at Twenty Five minutes past Four of the Clock)

(The House reassembled at 5-05 p.m. Mr. Speaker in the Chair)

SRI K. BHASKAR NAIDU.—Sir, with all humbleness I request you to kindly permit Sri Sheernaly Chandrasekhar to clarify those two points. Sir, we have at no time had any intention to question your right but in our anxiety to learn things he might have just got up and wanted to know some information. Please permit him to seek clarification from the Hon'ble Chief Minister.

ಶ್ರೀ ಎಸ್..ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಭಾಸ್ಕರ ನಾಯ್ಡುರವರು ಹೇಳಿದಂಥಾ ವಿಷಯಕ್ಕೆ ನಾನು ಬೆಂಬಲ ಕೊಡುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಅದೇನೆಂದರೆ ಇದು ಬಹಳ ಸೂಕ್ಷ್ಮವಾದ ವಿಚಾರ. ಎಲ್ಲಾ ರಾಜಕೀಯ ಪಕ್ಷಗಳ ನಡವಳಿಕೆಗಳ ಬಗ್ಗೆ ಸೇರಿದಂಥಾ ವಿಚಾರ. ಇದರಲ್ಲಿ ಬಹಳ ಮಹತ್ವವಾದ ವಿಚಾರ ಇದೆ. ತಮ್ಮಲ್ಲಿ ನಾನು ಅತ್ಯಂತ ವಿನಯದಿಂದ ತಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ತಾವು ಈಗಾಗಲೇ ಈ ಒಂದು ಪ್ರಸ್ತಾಪದ ಬಗ್ಗೆ ಕ್ಲೋಸ್ಡ್ ಅಂತ ಹೇಳಿಬಿಟ್ಟಿದ್ದೀರಿ. ತಾವು ಇದರ ಬಗ್ಗೆ ಕೊಟ್ಟಿರತಕ್ಕಂಥಾ ನಿರ್ಣಯವನ್ನು ಪುನರ್ವಿಮರ್ಶೆ ಮಾಡಿ ಅವರು ನಿಮ್ಮ ಮುಂದೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕೇಳುತ್ತೇನೆ. ಮತ್ತೆ ಯಾರಾದರೂ ಕೂಡ ಉಳಿದರೆ ಆ ಬಗ್ಗೆ ಉದ್ರೇಕವಾಗಿ ಭಾಷಣ ಮಾಡುವುದಕ್ಕೆ ಆಗುವುದಿಲ್ಲ. ಕೆಲವು ವಿಚಾರಗಳನ್ನು ಮಾನ್ಯ ಸದಸ್ಯರುಗಳು ವ್ಯಕ್ತ ಮಾಡಬೇಕಾಗಿರುತ್ತದೆ. ಆದುದರಿಂದ ತಾವು ಕೊಟ್ಟಿರತಕ್ಕಂಥಾ ಒಂದು ನಿರ್ಣಯದ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕು ಎಂದು ಮತ್ತೊಮ್ಮೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ನನ್ನ ಅಭಿಪ್ರಾಯವಾದರೂ ಇಷ್ಟೆ. ಓತಿನೇ ನಿಯಮದ ಪ್ರಕಾರ ರಿಜಿಡ್ ಆಗಿ ಫಾಲೋ ಮಾಡಬಹುದಾದರೂ ಕೂಡ ಒಂದೊಂದು ಸಮಯದಲ್ಲಿ ವಿಷಯ ಮತ್ತು ಅದರ ಗಂಭೀರತೆಯನ್ನು ಪರಿಗಣಿಸಿ ಅದರ ಒಂದು ಇತಿಮಿತಿಯನ್ನು ನೋಡಿಕೊಂಡು ವ್ಯವಹಾರ ಮಾಡಬೇಕಾಗಿದೆ. ನಾನು ಆರ್ಡರ್ ಆರ್ಡರ್ ಎಂದು ಹೇಳುತ್ತಾ ಇದ್ದರೂ ಸಹ ಮಾನ್ಯ ಸದಸ್ಯರು ಓತಿನೇ ನಿಯಮದ ಪ್ರಕಾರ ಸಮಾಧಾನಕರವಾಗುವ ಹಾಗೆ ವಿಷಯವನ್ನು ಪ್ರಸ್ತಾಪ ಮಾಡಲಿ ಅನ್ನುವ ಉದ್ದೇಶ ಇಟ್ಟುಕೊಂಡು ಕಾಲದ ಮಿತಿಯನ್ನು ನೋಡಿಕೊಂಡು ಪ್ರಸ್ತಾಪ ಮಾಡಲಿ ಅಂತ ಅಂದೆ. ನಾನು ಅವರನ್ನು ನಿಲ್ಲಿಸಬೇಕು ಅಂತ ಏನೂ ಉದ್ದೇಶ ಇಲ್ಲ. ಮಾನ್ಯ ಸದಸ್ಯರು ತಮ್ಮ ಭಾಷಣದ ಅಭಿಪ್ರಾಯವನ್ನು ಅಧ್ಯಕ್ಷರ ಗಮನಕ್ಕೆ ತರುವುದಕ್ಕೆ ಅವಕಾಶ ಉಂಟು. ಪಾಯಿಂಟ್ ಆಫ್ ಆರ್ಡರ್ ಹೇಳಿದ್ದರಿಂದ ಈ ಒಂದು ತೀರ್ಮಾನವನ್ನು ತೆಗೆದುಕೊಳ್ಳುವ ಒಂದು ಅವಕಾಶ ಬಂತು. ತಮಗೆ ಒಂದು ಮಾತು ಹೇಳುವುದಾದರೆ ನಾಳೆಯಿಂದಲೇ ಮಾತನಾಡುವಾಗ ಈ ಬಗ್ಗೆ ರಿಜಿಡ್ ಆಗಿ ಫಾಲೋ ಮಾಡುವುದಕ್ಕೆ ಈ ಸದನದ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೇನೆ ಎಂದು ನಾನು ಮೊದಲೇ ಹೇಳಿದೆ. ನಾವು ಓತಿನೇ ನಿಯಮದ ಪ್ರಕಾರ ರಿಜಿಡ್ ಆಗಿ ಫಾಲೋ ಮಾಡಬೇಕು ಅಂತ ಇದ್ದರೂ ಕೂಡ, ಆ ವಿಷಯದ ಗಂಭೀರತೆ ಹಾಗೂ ಅದರ ಒಂದು ಹಿನ್ನೆಲೆಯನ್ನು ನೋಡಿಕೊಂಡು ಆದರಿಂದ ರಾಜಕೀಯಕ್ಕೆ ಆಗತಕ್ಕಂಥಾ ಪರಿಣಾಮ ಮತ್ತು ಆಡಳಿತದ ಮೇಲೆ ಆಗತಕ್ಕಂಥಾ ಒಂದು ಪರಿಣಾಮ ಮತ್ತು ಮತ್ತಿತರ ವ್ಯವಹಾರಗಳ ಮೇಲೆ ಆಗತಕ್ಕಂಥಾ ಪರಿಣಾಮ ಆದನ್ನು ನೋಡುವುದಾದರೆ ಆದರಿಂದ ಮಾನ್ಯ ಸದಸ್ಯರಿಗೇನಾದರೂ ಅವರ ಮನಸಿನಲ್ಲಿ ಇರತಕ್ಕಂಥಾ ವಿಷಯಗಳನ್ನು ಹೇಳುವುದಕ್ಕೆ ಅಡ್ಡ ಬರಬಹುದು ಅಥವಾ ತಡೆ ಉಂಟಾಗಬಹುದು, ಹೀಗೆ ಹೇಳಿದರೆ ತಾವೇನೂ ಬೇರೆ ಭಾವಿಸಬಾರದು, ತಪ್ಪು ತಿಳಿದುಕೊಳ್ಳಬಾರದು ಎಂದು ಹೇಳುತ್ತೇನೆ. ತಮ್ಮ ಮೂಲಕ ಹಾಗೂ ಈ ಸದನದ ಮೂಲಕ ನಾನು ಹೇಳುತ್ತಿದ್ದೇನೆ ಮಾನ್ಯ ಸದಸ್ಯರು ಪ್ರಸ್ತಾಪ

ಮಾಡಲಿ ಅದಕ್ಕೆ ನನ್ನದೇನೂ ವಿರೋಧ ಇಲ್ಲಾ. ಆದರೆ ಒಂದೆರಡು ಮಾತುಗಳಲ್ಲಿ ತತ್‌ಕ್ಷಣದಲ್ಲಿ ಎಷ್ಟು ಬೇಕೋ ಅಷ್ಟು ಹೇಳಿರಿ. ಏತಕ್ಕೆಂದರೆ ಇದೇ ಸಮಯದಲ್ಲಿ ಮೇಲ್ಮನೆಯೂ ಕೂಡ ನಡೆಯುತ್ತಾ ಇರುವುದರಿಂದ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಯ ಕಾರ್ಯಕಲಾಪಗಳನ್ನು ನೋಡಿಕೊಳ್ಳಬೇಕಾಗುತ್ತದೆ, ಬೇರೆ ಬೇರೆ ಕಾರ್ಯಕಲಾಪಗಳೂ ಕೂಡ ಅವರಿಗೆ ಇವೆ. ಆ ಮನೆಯಲ್ಲಿ ಬಿಲ್ಲನ್ನು ಮಂಡಿಸಬೇಕಾಗುತ್ತದೆ, ಆ ಸಮಯದಲ್ಲಿ ಅವರು ಅಲ್ಲಿ ಇರಬೇಕಾಗುತ್ತದೆ. ಈ ಸಮಯವನ್ನೂ ಅವರು ಗಮನದಲ್ಲಿಟ್ಟು ಕೊಂಡು ಪ್ರಸ್ತಾಪ ಮಾಡಬಹುದು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ).—ಮಾನ್ಯ ಅಧ್ಯಕ್ಷರೇ, I am sorry for the whole affair. I would like to know from Hon. Chief Minister in this regard. ಹಿಂದೆ ಮಾನ್ಯ ಶ್ರೀ ದೇವರಾಜ ಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗ ಚಾಮುಂಡೇಶ್ವರಿ ಟ್ರಸ್ಟ್ ಮಾಡಿ ಆ ಜಮೀನನ್ನು ೫೦ ವರ್ಷಗಳ ಕಾಲ ಲೀಸ್‌ಗೆ ಕೊಟ್ಟರು. Don't you think it is dereliction of duty? ಇಲ್ಲಿ ಅಧಿಕಾರ ದುರುಪಯೋಗ ಆಗಿಲ್ಲವೇ ಎಂಬುದು ನನ್ನ ಮೊದಲನೇ ಪ್ರಶ್ನೆ. ಇನ್ನು ಎರಡನೆಯದಾಗಿ ಆ ಟ್ರಸ್ಟ್ ಮಾಡಿದಾಗ ಅಲ್ಲಿ ಕಾಂಗ್ರೆಸ್ (ಐ) ಆಫೀಸ್ ಇರಬೇಕು ಎಂದು ಹೇಳತಕ್ಕಂಥ ರೆಸಲ್ಯೂಷನ್ ಸಹ ಮಾಡಿದ್ದಾರೆ ಮತ್ತು ಕಾಂಗ್ರೆಸ್ (ಐ) ಹೆಸರಿನಲ್ಲಿ ಹಣ ಸಂಗ್ರಹಣೆ ಮಾಡಿದ್ದಾರೆ. ಈ ಕಾಂಗ್ರೆಸ್ (ಐ) ಕಾರ್ಯಕರ್ತರಿಗೆ ಅದರಲ್ಲಿ ಹಕ್ಕು ಭಾದ್ಯತೆ ಇಲ್ಲವೇ? ಇನ್ನು ಕಿನೇ ಪ್ರಶ್ನೆ ಎಂದರೆ ಇದೇ ಮಾನ್ಯ ವಿರೋಧ ಪಕ್ಷದ ನಾಯಕರು ಹಿಂದೆ ಜನತಾ ಪಕ್ಷದ ಕಚೇರಿಯನ್ನು, 'ಕರ್ನಾಟಕ ರಾಜ್ಯದ ಜನತೆ ಕಾಂಗ್ರೆಸ್' (ಒ) ಪಕ್ಷವನ್ನು ಸಂಪೂರ್ಣವಾಗಿ ತಿರಸ್ಕರಿಸಿಬಿಟ್ಟಿದೆ, ರೂಲಿಂಗ್ ಪಾರ್ಟಿಯಾವ ಸಮ್ಮ ಪಕ್ಷಕ್ಕೆ ಸಂಪೂರ್ಣವಾದ ಬೆಂಬಲವನ್ನು ಕೊಟ್ಟಿದೆ' ಎನ್ನತಕ್ಕಂಥ ಕಾರಣದಿಂದ ಆ ಕಚೇರಿಯನ್ನು ಆಕ್ರಮಣ ಮಾಡಿಕೊಳ್ಳುವುದಕ್ಕೆ ಹೋಗಲಿಲ್ಲವೇ? ಇದೇ ಮಾನ್ಯ ವಿರೋಧಪಕ್ಷದ ನಾಯಕರು ಆವತ್ತು ಅವರ ಗುಂಪಿನ ನಾಯಕತ್ವವನ್ನು ಪ್ರಹಿಸಿರಲಿಲ್ಲವೇ? ಹಿಂದೆಯೆಲ್ಲಾ ಅವರು ಕಾಂಗ್ರೆಸ್ (ಐ) ನಿಜವಾದ ಕಾಂಗ್ರೆಸ್ ಎಂದು ಹೇಳಿರುವುದರಿಂದ ಆ ಕಚೇರಿಯ ಮೇಲೆ ಕಾಂಗ್ರೆಸ್ (ಐ)ನವರಿಗೆ ಅಧಿಕಾರ ಬರುವುದಿಲ್ಲವೇ ಎಂಬುದನ್ನು ಮಾನ್ಯ ಮುಖ್ಯ ಮಂತ್ರಿಯವರು ಹೇಳಬೇಕು.

ಶ್ರೀ ಮಳ್ಳೂರ್ ಆನಂದರಾವ್.—ಮಾನ್ಯ ಅಧ್ಯಕ್ಷರೇ, ನಾನು ಈ ವಿಚಾರದಲ್ಲಿ ಕ್ಲಾರಿಫಿಕೇಷನ್ ಕೇಳುವುದಕ್ಕೆ ಇಷ್ಟಪಡುತ್ತೇನೆ. ಒಂದನೆಯದನ್ನು ಮಾನ್ಯ ಶೀರ್ನಾಳಿ ಚಂದ್ರಶೇಖರ್‌ರವರು ಕೇಳಿರುವುದರಿಂದ ಅದನ್ನು ನಾನು ಕೇಳುವುದಕ್ಕೆ ಹೋಗುವುದಿಲ್ಲ. ಎರಡನೆಯದಾಗಿ ೧೯೭೫-೭೪ರಲ್ಲಿ ಈಗಿನ ಜನತಾ ಪಕ್ಷದ ಕಚೇರಿ ಅಂದರೆ ಆಗಿನ ಕಾಂಗ್ರೆಸ್ (ಒ) ಕಚೇರಿಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ವಶಪಡಿಸಿಕೊಂಡಾಗ ಅನಂತರದಲ್ಲಿ ಏನೇನು ನಿರ್ಣಯಗಳು ಆಗಿದೆಯೋ ಅದಕ್ಕೆಲ್ಲಾ ಕಾರಣ ಕರ್ತರು ಯಾರು? ಅದಕ್ಕೆಲ್ಲಾ ಕಾರಣಕರ್ತರು ಮಾನ್ಯ ದೇವರಾಜ್ ಅರಸ್ ಅಲ್ಲವೇ? ಅವರ ಕಚೇರಿಯ ಮೇಲೆ ಕಾಂಗ್ರೆಸ್ (ಐ) ಕಾರ್ಯಕರ್ತರು ಕೆಲವರು ಆಕ್ರಮಣ ಮಾಡಿರುವುದನ್ನು ಪ್ರತಿಭಟಿಸಿ ಈವತ್ತು ಅವರು ಈ ಸಭೆಯಿಂದ ವಾಕೌಟ್ ಮಾಡಿ ಹೊರಟು ಹೋಗಿರು. ಹಿಂದೆ ಅವರ ಗುಂಪಿನವರಿಂದ ಏನೊಂದು ಆಕ್ರಮಣ ನಡೆಯಿತೋ ಅದರಲ್ಲಿ ಕಾಲುಭಾಗದಷ್ಟು ಕೂಡ ನಿನ್ನೆ ನಡೆದಿಲ್ಲ. ನಾನು ಕಾಂಗ್ರೆಸ್ (ಐ) ಕಾರ್ಯಕರ್ತನಾಗಿ ಇವತ್ತು ಅಲ್ಲಿಗೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಇವತ್ತು ಕೆಲವಾರು ಕ್ಲಾರಿಫಿಕೇಷನ್ ಕೇಳಬೇಕು, ಅಂತ ಇಲ್ಲಿ ನಿಂತಿದ್ದೇನೆ. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಡಬೇಕು. ಆ ಜಮೀನನ್ನು ೧೯೭೫ರಲ್ಲಿ ಕಾಂಗ್ರೆಸ್ (ಐ) ಪಕ್ಷಕ್ಕೆ ಕೊಡಬೇಕೆಂದು ಏಕ ಕ್ಯಾಬಿನೆಟ್ ನಿರ್ಣಯ ಆಗಿದೆಯೇ? ಅದು ನಿಜವೆ? ಇನ್ನು ವಾಸ್ತವವಾಗಿ ಅದು ಕಾಂಗ್ರೆಸ್ (ಐ) ಪಕ್ಷಕ್ಕೆ ಸೇರಿದ ಕಚೇರಿಯಾಗಿತ್ತು ಮತ್ತು ಅಲ್ಲಿ ಕಾಂಗ್ರೆಸ್ ಎನ್ನುವಷನ್ ಕಛೇರಿ ನಡೆಯುತ್ತು ಎಂಬುದು ಎಲ್ಲರಿಗೂ ಗೊತ್ತಿದೆ. ಹಿಂದೆ ಶ್ರೀ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಅಲ್ಲಿ ಚಾಮುಂಡೇಶ್ವರಿ ಟ್ರಸ್ಟ್ ಮಾಡಿ ಇಟ್ಟರು. ಅದಕ್ಕೆ ಏಮ್ಸ್ ಅಂಡ್ ಆಬ್ಜೆಕ್ಟ್ಸ್ ಇರಬೇಕು. ಆದರಂತೆ ಆ ಸ್ಥಳದ ಉಪಯೋಗವನ್ನಾಗುತ್ತಿದೆಯೇ? ಆದನ್ನು ಬಿಟ್ಟು ಬೇರೆಯಾದ್ದಕ್ಕೆ ಉಪಯೋಗವಾಗುತ್ತಿದೆಯೇ? ಎಂಬುದನ್ನು ಮಾನ್ಯ ಮುಖ್ಯಮಂತ್ರಿಯವರು ತಿಳಿಸಬೇಕು. ಚಾಮುಂಡೇಶ್ವರಿ ಟ್ರಸ್ಟ್ ಹೆಸರಿನಲ್ಲಿ ಆ ಜಮೀನು ಇರುವುದರಿಂದ ಅಲ್ಲಿ ಧಾರ್ಮಿಕ ಕಾರ್ಯಗಳು ನಡೆಯುತ್ತಿದೆಯೇ? ಚಂಡಿ ಹೋಮ ನಡೆಯುತ್ತಿದೆಯೇ? ಬೇರೆ ಬೇರೆ, ಪಕ್ಷಗಳು ರಾಜಕೀಯ ಚಳುವಳಿಗೆ ಸಂಬಂಧಪಟ್ಟ ಹಾಗೆ ಅಲ್ಲಿ ಸಭೆ ನಡೆಸುವುದಕ್ಕೆ ಅವಕಾಶ ಮಾಡಿಕೊಡುವ ಬಗ್ಗೆ ಏಮ್ಸ್ ಅಂಡ್ ಆಬ್ಜೆಕ್ಟ್ಸ್‌ನಲ್ಲಿ ಅದನ್ನು ಹೇಳಿ

ದ್ದಾರೆಯೇ? ಚಾಮುಂಡೇಶ್ವರಿ ಟ್ರಸ್ಟ್‌ನ ವಿಷಯ್ದ ಅಂಡ್ ಆಬ್ಜೆಕ್ಟ್ಸ್‌ಗೆ ವಿರುದ್ಧವಾಗಿ ಅದು ಇದ್ದರೆ ಪುನಃ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೀರಾ? ಅವತ್ತಿನ ದಿವಸ ಅಲ್ಲಿ ಮೈಕೋ ಫ್ಯಾಕ್ಟರಿಯ ಎಂಪ್ಲಾಯೀಸ್ ಒಂದು ಜನರಲ್ ಬಾಡಿ ಮೀಟಿಂಗನ್ನು ಕರೆದರು. It is controlled by Marxist communist Units. ಮೈಕೋದವರು ಅಲ್ಲಿ ಜನರಲ್ ಬಾಡಿ ಮೀಟಿಂಗ್ ಮಾಡಬೇಕಾದರೆ ಚಾಮುಂಡೇಶ್ವರಿ ಟ್ರಸ್ಟ್‌ನವರಿಂದ ಒಪ್ಪಿಗೆಯನ್ನು ತೆಗೆದುಕೊಂಡಿದ್ದಾರೆಯೇ? ಚಾಮುಂಡೇಶ್ವರಿ ಟ್ರಸ್ಟ್‌ನವರು ಏನಾದರೂ ಈ ರೀತಿ ರಾಜಕೀಯ ಚಳುವಳಿಗೆ ಸಂಬಂಧಪಟ್ಟ ಹಾಗೆ ಅಥವಾ ರಾಜಕೀಯ ಚಟುವಟಿಕೆಗೆ ಸಂಬಂಧಪಟ್ಟ ಹಾಗೆ ಸಭೆ ನಡೆಸುವುದಕ್ಕೆ ಅವಕಾಶ ಕೊಡುತ್ತಿದ್ದಾರೆಯೇ ? ಆ ರೀತಿ ಅವಕಾಶ ಕೊಟ್ಟ ಮೇಲೆ ಅವರು ಹೋಗಿ ಅಲ್ಲಿ ಜನರಲ್ ಬಾಡಿ ಮೀಟಿಂಗ್ ಮಾಡಿದ್ದರಿಂದ ಈ ರೀತಿ ಘರ್ಷಣೆ ಆಯಿತೇ? ಈ ಎಲ್ಲಾ ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಯವರು ತಿಳಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಈ ಒಂದು ಘಟನೆಯ ಬಗ್ಗೆ ಹೇಳುವಾಗ ಈ ರಾಜ್ಯದಲ್ಲಿ ರಾಜಕೀಯ ಪಕ್ಷಗಳ ಚಟುವಟಿಕೆ ಮೇಲೆ ಅದಂಥ ಈ ಒಂದು ಆಘಾತವನ್ನು ನಾನು ಪ್ರಥಮವಾಗಿ ಒಲವಾಗಿ ಖಂಡಿಸುತ್ತೇನೆ. ಈ ರಾಜ್ಯದಲ್ಲಿ ನಾವು ಪ್ರಜಾಪ್ರಭುತ್ವದ ತತ್ವಗಳಿಗೆ ಮನ್ನಣೆ ಕೊಟ್ಟು ಕೆಲಸ ಮಾಡುತ್ತಿರಬೇಕಾದರೆ ಕೆಲವೊಂದು ಪಾಲ್ಯಗಳನ್ನು ನಾವು ಕಾಪಾಡಿಕೊಂಡು ಬರಬೇಕಾಗುತ್ತದೆ. ಕಳೆದ ಅನೇಕ ಶತಮಾನಗಳಿಂದ ಪ್ರಜಾಪ್ರಭುತ್ವ ತತ್ವವನ್ನು ಒಪ್ಪಿದಂಥ ರಾಷ್ಟ್ರಗಳಲ್ಲಿ ಮತ್ತು ನಮ್ಮ ರಾಷ್ಟ್ರದಲ್ಲಿ ಕೂಡ ಕೆಲವೊಂದು ನಿರ್ದಿಷ್ಟ ನಡವಳಿಕೆಗಳನ್ನು ಅಂದರೆ ಕೋಡ್ ಆಫ್ ಕಾಂಡಕ್ಟ್‌ನ್ನು ಪರಿಪಾಲನೆ ಮಾಡುತ್ತಾ ಬಂದಿದ್ದಾರೆ. ಈ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವದ ಉಳಿವಿಗಾಗಿ ಮತ್ತು ಅದು ಇನ್ನೂ ಮಹತ್ತರವಾಗಿ ಬೆಳೆಯುವುದಕ್ಕಾಗಿ ಅದನ್ನು ಮೊದಲಿನಿಂದಲೂ ಪರಿಪಾಲನೆ ಮಾಡಿಕೊಂಡು ಬರುತ್ತಿದ್ದಾರೆ. ಅದರಲ್ಲಿಯೂ ಕೂಡ ಸರ್ಕಾರವನ್ನು ನಡೆಸತಕ್ಕಂಥ ರಾಜಕೀಯ ಪಕ್ಷಗಳು ಬೈತುಂಬ ಎಚ್ಚರವಹಿಸಿ ಇಂತಹ ರಾಜಕೀಯ ಪಕ್ಷಗಳ ಮೇಲೆ ಆಗತಕ್ಕಂಥ ಆಘಾತಗಳನ್ನು ತಡೆಯತಕ್ಕಂಥಾದ್ದು ಅತ್ಯಂಥ ಅವಶ್ಯ. ಈ ಒಂದು ಮೂಲಭೂತವಾದ ಪ್ರಶ್ನೆಯನ್ನು ಈ ಸಮಸ್ಯೆ ಎತ್ತಿದೆ. ಇದನ್ನು ನಾನು ಹೇಳುವಾಗ ಯಾವುದೇ ಸರ್ಕಾರ ಅಥವಾ ಯಾವುದೇ ರಾಜಕೀಯ ಪಕ್ಷವನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳುತ್ತಾ ಇಲ್ಲ. ಇವತ್ತು ಯಾವುದೇ ಪಕ್ಷ ಅಧಿಕಾರದಲ್ಲಿರಲಿ ಸಂವಿಧಾನ ಬದ್ಧವಾಗಿ ರಾಜಕೀಯ ಪಕ್ಷಗಳು ತಮ್ಮ ತಮ್ಮ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಲು ಸಂಪೂರ್ಣ ಸ್ವಾತಂತ್ರ್ಯ ಇರತಕ್ಕಂಥ ವಾತಾವರಣವನ್ನು ನಿರ್ಮಾಣ ಮಾಡತಕ್ಕಂಥಾದ್ದು ಸರ್ಕಾರದ ಕರ್ತವ್ಯ. ಅಂತಹ ಒಂದು ಸ್ವತಂತ್ರಕ್ಕೆ ಅಡ್ಡಿಯನ್ನು ಯಾರು ಮಾಡಿದರೂ ಅದನ್ನು ತಡೆಯತಕ್ಕಂಥಾದ್ದು ಸರ್ಕಾರದ ಅಧ್ಯಕರ್ತವ್ಯ ಎಂದು ನಾನು ಈ ಸಮಯದಲ್ಲಿ ಹೇಳಬೇಕಾಗುತ್ತದೆ. ಈ ದೃಷ್ಟಿಯಿಂದ ಹೇಳುವಾಗ ಮೊನ್ನೆ ನಡೆದಂಥ ಘಟನೆ ಬಹಳ ಖಂಡನಾರ್ಹ. ಆ ಘಟನೆ ನಡೆದಿರತಕ್ಕಂಥ ಸ್ಥಳದಲ್ಲಿರತಕ್ಕಂಥ ಸ್ವತ್ತು ಯಾರದು? ಆ ಸ್ವತ್ತನ್ನು ಚಾಮುಂಡೇಶ್ವರಿ ಟ್ರಸ್ಟ್‌ಗೆ ಹಿಂದೆ ಕೊಟ್ಟಿರತಕ್ಕಂಥಾದ್ದು ಕಾನೂನು ಬದ್ಧವಾಗಿದೆಯೇ ಇಲ್ಲವೇ? ಇದನ್ನು ನಾವು ಯೋಚನೆ ಮಾಡಬೇಕು. ಚಾಮುಂಡೇಶ್ವರಿ ಟ್ರಸ್ಟ್‌ನಿಂದ ತೆಗೆದುಕೊಂಡು ಅಲ್ಲಿ ಕಾಂಗ್ರೆಸ್ (ಯು) ಪಕ್ಷದ ಆಫೀಸನ್ನು ನಡೆಸುತ್ತಿರುವುದು ಕಾನೂನು ಬದ್ಧವಾಗಿದೆಯೇ ಇಲ್ಲವೇ ಎನ್ನತಕ್ಕಂಥ ಪ್ರಶ್ನೆಗೆ ನಾನು ಹೋಗುವುದಿಲ್ಲ. ಆ ಸ್ಥಳದಲ್ಲಿ ಕಾಂಗ್ರೆಸ್ (ಯು) ಪಕ್ಷ ತನ್ನ ಚಟುವಟಿಕೆಗಳನ್ನು ನಡೆಸುತ್ತಾ ಇದ್ದದ್ದನ್ನು ನಾವು ಪ್ರತಿಕೆಗಳಲ್ಲಿ ಓದಿ ತಿಳಿದುಕೊಂಡಿದ್ದೇವೆ. ಈ ರೀತಿ ಇರುವಾಗ ಕಾಂಗ್ರೆಸ್ (ಐ) ಪಕ್ಷದ ಕೆಲವು ಕಾರ್ಯಕರ್ತರು ಆಲ್ಲಿ ಅತಿಕ್ರಮಿಸಿ ಅಲ್ಲಿ ನಡೆಯತಕ್ಕಂಥ ಚಟುವಟಿಕೆಗಳನ್ನು ನಿಲ್ಲಿಸತಕ್ಕಂಥ ಈ ಕೃತ್ಯವನ್ನು ಏನು ಎಸಗಿದ್ದಾರೆ ಅದನ್ನು ಈ ಸರ್ಕಾರ ಕೂಡ ಒಪ್ಪುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಆ ಬಗ್ಗೆ ಸರ್ಕಾರದವರು ತ್ವರಿತವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ, ಅಲ್ಲಿ ಈ ಒಂದು ಘಟನೆ ನಡೆದ ಮೇಲೆ ನನಗೆ ಇದೇ ತರಹದ ಹಿಂದಿನ ಘಟನೆಯ ಕಹಿ ನೆನಪು ಬರುತ್ತಿದೆ. ಇವನ್ನು ನಾನು ಇವತ್ತು ಇಲ್ಲಿ ನಿಮಗೆಲ್ಲಾ ನೆನಪಿಸಬೇಕಾಗುತ್ತದೆ. ಇಂತಹ ಒಂದು ಪರಿಸ್ಥಿಯಲ್ಲಿ ಸರ್ಕಾರ ಯಾವ ರೀತಿ ನಡೆದುಕೊಳ್ಳಬೇಕು ಎಂಬುದನ್ನು ಕಾಂಗ್ರೆಸ್ (ಯು) ಪಕ್ಷದ ನಾಯಕರಾದ ಶ್ರೀಮಾನ್ ದೇವರಾಜ್ ಅರಸ್‌ರವರು ಇಲ್ಲಿ ಮಾರ್ಮಿಕವಾಗಿ ಹೇಳಿದ್ದಾರೆ. ಅವರು ಹೇಳಿರತಕ್ಕಂಥ ವಿಚಾರಗಳನ್ನು ನಾನು ಇವತ್ತು ಸಮರ್ಥನೆ ಮಾಡುತ್ತೇನೆ. ೧೯೭೨–೭೩ರಲ್ಲಿ ನಡೆದಂಥ ಘಟನೆಯ ಬಗ್ಗೆ ಈಗಾಗಲೇ ನನ್ನ ಮಾನ್ಯ ಗೆಳೆಯರು ಹೇಳಿದ್ದಾರೆ. ಆಗ ಮಾನ್ಯ ವೀರೇಂದ್ರ ಪಾಟೀಲರು ಈ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದರು.

೧೯೬೯ರಲ್ಲಿ ಕಾಂಗ್ರೆಸ್ ಇಬ್ಭಾಗವಾದ ಮೇಲೆ ಸಂಸ್ಥಾ ಕಾಂಗ್ರೆಸ್ ಅಂದರೆ ಕಾಂಗ್ರೆಸ್ (ಒ) ಪಕ್ಷ ೩ ವರ್ಷಗಳವರೆಗೆ ರೇಸ್‌ಕೋರ್ಸ್‌ನ ಹತ್ತಿರ ಇರತಕ್ಕಂಥ ಕಟ್ಟಡದಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ಕಾನೂನ್ಬದ್ಧವಾಗಿ ನಡೆಸಿಕೊಂಡು ಬಂದಿತ್ತು. ೧೯೭೨ರಲ್ಲಿ ಹಿಂದಿನ ಸರ್ಕಾರ ಅಂದರೆ ಈಗಿನ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ದೇವರಾಜಅರಸ್‌ರವರ ಸರ್ಕಾರ ಇದ್ದಾಗ ಇದೇ ರೀತಿ ಸಂಸ್ಥಾ ಕಾಂಗ್ರೆಸ್ ಕಚೇರಿಯ ಮೇಲೆ ದಬ್ಬಾಳಿಕೆ ಮಾಡಿ ಅನೇಕ ಜನ ನಮ್ಮ ಕಾರ್ಯಕರ್ತರನ್ನು ಬಡಿದು ಹೊರಕ್ಕೆ ದಬ್ಬಿದ ಕಹಿ ನೆನಪು ಇವತ್ತು ನನಗೆ ಬರುತ್ತಿದೆ.

ಹಾಗೆ ನಮ್ಮ ಅನೇಕ ಕಾರ್ಯಕರ್ತರಿಗೆ ಬಡಿದು ಕೈಯಿಂದ ತಬ್ಬಿದ್ದು ಈಗ ನನಗೆ ನೆನಪು ಬರುತ್ತದೆ. ಇದರ ನಾಯಕತ್ವವನ್ನು ಡಾ. ನಟರಾಜ್ ಅವರು ಮತ್ತು ಈಗಿನ ಮುಖ್ಯಮಂತ್ರಿಗಳು ವಹಿಸಿದ್ದರು ಎಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ.

ಶ್ರೀ ಆರ್. ಗುಂಡೂರಾವ್.—ಅವತ್ತಿನ ನಾಯಕತ್ವವನ್ನು ವಹಿಸಿದ್ದವರು ಮಾಜಿ ಮಂತ್ರಿಗಳಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದರ ಬಗ್ಗೆ ಮಾಹಿತಿಯನ್ನು ಹೊಂದಿರತಕ್ಕಂತಹ ಡಾ. ತಿಮ್ಮೇಗೌಡರು ಇದ್ದಾರೆ. ಈಗ ಕಾನೂನು ಮಂತ್ರಿಗಳಾಗಿರತಕ್ಕ ಶ್ರೀಮಾನ್ ವೈ. ರಾಮಕೃಷ್ಣ ಅವರು ಇದ್ದಾರೆ. ಅವತ್ತು ಪೆಟ್ಟು ತಿಂದಂಥಹ ಶ್ರೀಮಾನ್ ಚಂದ್ರಶೇಖರ್ ಅವರು ಇದ್ದಾರೆ ಇವರೆಲ್ಲರಿಗೂ ವಿಷಯ ಗೊತ್ತು. ಈ ಒಂದು ಪ್ರಕರಣಕ್ಕೆ ಸಂಭಂದಪಟ್ಟ ಹಾಗೆ ೧೪೫ನೇ ಸೆಕ್ಷನ್ ಆನ್ವಯ ಮಾಡಿ ಹೈಕೋರ್ಟ್‌ಗೆ ಹೋಗಿ ಆ ಕಟ್ಟಡದ ಪೋಜಿಷನ್ ತೆಗೆದುಕೊಂಡಿದ್ದಾರೆ. ಆ ಒಂದು ಸಂದರ್ಭದಲ್ಲಿ ಪಾರ್ಟಿ ಆಫೀಸು ಒಂದು ಷೆಡ್ಡ್‌ನಲ್ಲಿ ನಡೆಸುತ್ತಿದ್ದರು. ಇದನ್ನೆಲ್ಲಾ ನೋಡಿದರೆ ನಾನು ನನ್ನ ಅನುಭವದಿಂದ ಕೂಡ ಹೇಳುವುದಾದರೆ ಹೊನ್ನೆ ನಡೆದಂಥ ಘಟನೆಯನ್ನು ಖಂಡಿಸಬೇಕಾಗುತ್ತದೆ. ಇವತ್ತು ನಾನು ಒಂದು ಮಾತನ್ನು ಹೇಳಿದರೆ ತಪ್ಪಾಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ಗುಂಡೂರಾವ್ ಆವರಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಅವರು ೧೨ ವರ್ಷ ಇರಬಹುದು ಅಥವಾ, ೧೫ ವರ್ಷ ಇರಬಹುದು. ಅಥವಾ ಎರಡು ವರ್ಷ ಇರಬಹುದು. ಅದು ಮಹತ್ವವಲ್ಲ. ಆದರೆ ಅವರು ಮುಖ್ಯ ಮಂತ್ರಿಗಳಾಗಿರುವಾಗ ಆವರ ಸರ್ಕಾರ ಯಾವ ರೀತಿ ನಡೆದುಕೊಂಡು ಬಂದಿದೆ ಎಂಬುದು ಬೆಲೆ ಬಾಳತಕ್ಕ ಮಾತು. ಶ್ರೀಮಾನ್ ದೇವರಾಜಅರಸ್ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಇದೇ ರೀತಿ ನಡೆಯಿತು ಆದ್ದರಿಂದ ಬಿತ್ತಿದ್ದನ್ನು ಬೆಳೆಯುಕೊ ಎಂದು ಶ್ರೀಮಾನ್ ದೇವರಾಜ ಅರಸ್ ಅವರಿಗೆ ನಾವು ಹೇಳಬೇಕಾಗಿದೆ. ಮುಳ್ಳನ್ನು ಬಿತ್ತಿದ್ದರೆ ಮುಳ್ಳೆ ಬೆಳೆಯುತ್ತದೆ. ಇವತ್ತು ರಾಜಕೀಯದಲ್ಲಿ ಮುಳ್ಳನ್ನು ಬಿತ್ತುವ ಕೆಲಸ ನಡೆಯುತ್ತಿದೆ. ಇದು ನಿಲ್ಲದೆ ಹೋದರೆ ರಾಜಕೀಯ ಪಕ್ಷಗಳು ತಮ್ಮ ಚಟುವಟಿಕೆಗಳನ್ನು ಕಾನೂನು ಬದ್ಧವಾಗಿ ನಡೆಸುವುದಕ್ಕೆ ಆಗುವುದಿಲ್ಲ. ರಾಜಕೀಯ ಪಕ್ಷಗಳು ಸಹಾ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಸರ್ಕಾರದವರು ಕಾನೂನು ಪ್ರಕಾರ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಭರವಸೆಯನ್ನು ಕೊಟ್ಟಿದ್ದಾರೆ, ಅದರಂತೆ ನುಡಿದಂತೆ ನಡೆಯತಕ್ಕ ಒಂದು ಕಾರ್ಯವನ್ನು ಶ್ರೀಮಾನ್ ಗುಂಡೂರಾಯರ ಸರ್ಕಾರ ಆದನ್ನು ಮಾಡಿ ತೋರಿಸಬೇಕು. ಇವತ್ತು ಕಾನೂನು ಬಾಹಿರವಾಗಿ ಅಕ್ರಮವಾಗಿ ಏನೇನ ಕೆಲಸ ಮಾಡಿದ್ದಾರೆ ಅಂಥವರು ಯಾವುದೇ ಪಕ್ಷದವರಾಗಿರಲಿ ಅವರ ಮೇಲೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಈ ವಿಚಾರ ಪತ್ರಿಕೆಗಳಲ್ಲಿಯೂ ಕೂಡ ಬಂದಿದೆ. ಶಾಸಕರ ಮೇಲೆ ಹಲ್ಲೆಯಾಗಿದೆ. ತಪ್ಪಿತಸ್ಥರು ಯಾರೇ ಆಗಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ ಮತ್ತು ಭರವಸೆಯನ್ನು ಕೊಟ್ಟಿದ್ದಾರೆ. ಆದರೆ ಆ ರೀತಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಂಡಿದ್ದು ನಮಗೆ ಎಲ್ಲೂ ಕಾಣಲಿಲ್ಲ. ಇಂಥ ಕೃತ್ಯಗಳಿಗೆ ನಾವು ಯಾವತ್ತೂ ಬೆಂಬಲ ಕೊಡುವುದಿಲ್ಲ ಎಂದು ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ಜನತೆಗೆ ನಂಬಿಕೆ ಬರಬೇಕಾದರೆ ಕಾನೂನು ರೀತಿಯ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಂಡು ಎಲ್ಲಾ ರಾಜಕೀಯ ಪಕ್ಷಗಳು ಸ್ವತಂತ್ರವಾಗಿ ವಿಚಾರಗಳನ್ನು ವಿಚಾರಣೆ ಮಾಡುವ ತಕ್ಕ ಪರಿಸ್ಥಿತಿಯನ್ನು ವಾತಾವರಣವನ್ನು ನಿರ್ಮಾಣ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಅದನ್ನು ಮಾಡುತ್ತಾರೆ ಎಂದು ನಾನು ನಂಬಿದ್ದೇನೆ. ಇವತ್ತು ಜನತಾ ಪಾರ್ಟಿಯ ಪಕ್ಷದ ಕಚೇರಿ ಏನು ನಡೆಯುತ್ತಿದೆ ಅದು ಶ್ರೀಮಾನ್ ಸುಬ್ಬಣನವರು ಹಿಂದೆ ಇದ್ದ ಕಾಂಗ್ರೆಸ್ (ಒ) ಪಕ್ಷಕ್ಕೆ ದಾನವಾಗಿ ಕೊಟ್ಟಿದ್ದರು.

ಅಧ್ಯಕ್ಷರು.—ಇಂಡಿಯನ್ ನಾಷನಲ್ ಕಾಂಗ್ರೆಸ್ ಇದ್ದಾಗ ದಿವಂಗತ ಆರ್. ಸುಬ್ಬಣ್ಣನವರು ಆ ಜಾಗವನ್ನು ಕಾಂಗ್ರೆಸ್ಸ್ 'ಓ' ಪಕ್ಷದ ಕಚೇರಿಗೆ ಕೊಟ್ಟಿದ್ದರು.

ಶ್ರೀ ಆರ್. ಗುಂಡೂರಾವ್.—ಈಗ ಮಾನ್ಯ ಅಧ್ಯಕ್ಷರೆ ಹೇಳಿದ್ದಾರೆ ಅವರಿಗೂ ಗೊತ್ತಿದೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ ಆ ಜಾಗವನ್ನು ಶ್ರೀಮಾನ್ ಸುಬ್ಬಣ್ಣನವರು ಕೊಟ್ಟಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ಕಾನೂನು ಬದ್ಧವಾಗಿ ಕಾಂಗ್ರೆಸ್ಸ್ 'ಓ' ಪಕ್ಷದಿಂದ ಜನತಾ ಪಕ್ಷಕ್ಕೆ ಬಂದಿದೆ. ಈಗ ಸುಬಾಸ್ ನಗರ ಮೈದಾನ ಎನಿದೆ ಅದನ್ನು ಶ್ರೀಮಾನ್ ವೀರೇಂದ್ರ ಪಾಟೀಲ್ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಕಾಂಗ್ರೆಸ್ 'ಓ' ಪಕ್ಷಕ್ಕೆ ವಸ್ತು ಪ್ರದರ್ಶನವನ್ನು ನಡೆಸುವುದಕ್ಕೆ ಕೊಟ್ಟಿದ್ದರು. ಆ ಮೇಲೆ ಅದು ೧೯೭೨ರಲ್ಲಿ ಕ್ಯಾನ್ಸಲ್ ಆಯಿತು. ಇದು ಒಂದು ತರಹ ದಾಯಾದಿಗಳ ಜಗಳವಿದ್ದ ಹಾಗೆ ಆಗಿದೆ.

ಶ್ರೀ ಆರ್. ಗುಂಡೂರಾವ್.—ನಮ್ಮ ಸರ್ಕಾರ ಪೋಲಿಟಿಕಲ್ ಪಾರ್ಟಿಗೆ ಕೊಟ್ಟಿರುವುದನ್ನು ಯಾವುದು ಕ್ಯಾನ್ಸಲ್ ಮಾಡಿಲ್ಲ. ಆ ಜಾಗವನ್ನು ಯಾವುದೇ ರಾಜಕೀಯ ಪಕ್ಷಕ್ಕೆ ಕೊಟ್ಟಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ಜಾಗವನ್ನು ಶ್ರೀ ಚಾಮುಂಡೇಶ್ವರಿ ಟ್ರಸ್ಟ್‌ಗೆ ಕೊಟ್ಟಿದ್ದಾರೆ ಎಂದು ಗೊತ್ತಾಗಿದೆ. ಆದರೆ ಇದು ಕಾನೂನು ಪ್ರಕಾರ ಇದೆಯೇ ಇಲ್ಲವೆ ಎಂಬುದನ್ನು ಆಲೋಚನೆ ಮಾಡಿ. ಆದರೆ ಒಂದು ವಿಷಯವನ್ನು ಮಾತ್ರ ನಾನು ನನ್ನ ಪಕ್ಷದ ಪರವಾಗಿ ನನ್ನ ಪರವಾಗಿ ಮತ್ತು ನಾಗರೀಕರ ಪರವಾಗಿ ಅತ್ಯಂತ ಮನನೊಂದು ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈಗ ನಡೆದಿರುವಂತಹ ಚಟುವಟಿಕೆಗಳು ಎನಿವೆ ಅವು ಸರಿಯಲ್ಲ. ಯಾವುದೇ ಪಕ್ಷವಾಗಲಿ ಕಾನೂನು ಪ್ರಕಾರ ಕೆಲಸ ಮಾಡುವುದಕ್ಕೆ ಅವಕಾಶ ಇರಬೇಕು. ಅತಿಕ್ರಮಣ ಮಾಡಿರುವಂಥಹ ಕೆಲಸವನ್ನು ತಡೆಯಬೇಕಾಗುತ್ತದೆ. ಅದಕ್ಕೋಸ್ಕರವಾಗಿ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಈ ಒಂದು ಘಟನೆಯಲ್ಲಿ ಯಾರೇ ತಪ್ಪು ಮಾಡಿರಲಿ ಅಂಥವರನ್ನು ಶಿಕ್ಷೆಗೆ ಒಳಪಡಿಸಬೇಕು. ಈ ದೃಷ್ಟಿಯಿಂದ ಅಧಿಕಾರಿಗಳಿಗೆ ಆದೇಶ ಕೊಟ್ಟು ಸರಿಯಾದ ರೀತಿಯಲ್ಲಿ ಇನ್‌ವೆಸ್ಟಿಗೇಷನ್ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

SRI MICHAEL FERNANDES .—Mr. Speaker Sir. I would like to seek a few clarifications from the Hon. Chief Minister, based on his statement more from the trade union angle. Before I come to that, I would like to point out that we have been led to see in the conduct of the Chief Minister that he wants to give a clean administration, that he wants to bring about changes in the administrative set up of the State and see that there is efficiency and people can put their faith in the administration. But I find that the events of the last couple of weeks where the policewere involved believe this claim or this hopethe people have in this effort. A few days ago there was a very dangerous poster and that was put up in the very presence of the police. under the very nose of the police and there has been total inaction on the part of the police. It is a different matter that those who put up the posters have disowned it now. It is very unfortunate. We should want even a wrong doer to have the moral courage to admit that he did a wrong rather than disown his wrong. The police have, according to me, come out in bad light on that incident. Now we see this yesterday's incident. The Chief Minister says, in his statement, that the police arrived there in time. What is that ' in time ' ? That is very important. Police can time their time, they can time their arrival. It would appear that the wrong acts were allowed to be per-

petrated first and then the police came on the scene. I am told, by an eye witness, that one of those rowdies had a knife, with which he injured a person-one of the Mico workers – and then the police helped that rowdy to get into an auto and escape. This is what was told me, and I shall try to bring that witness and see that he meets the Chief Minister or at least the Police Commissioner. The important thing is that the Police have now made it a practice to deny permission to hold General Body Meetings by the unions particularly when there is a pressure on the unions to hold such meetings.

Now, the MICO union had pressure on it to hold the General Body Meeting. A certain section of the workers under the leadership again of the same youth Congress I fellows had been using knives to get signatures on the requisition. In that context, the Union wanted to hold the General Body Meeting, the police denied the permission and they had to go to this Congress U office ground, the same way as the Joint Action Front had to do a week before because the Police refused the permission to hold the meeting in public grounds. In this situation, the Police also knew, I am sure, that there was going to be a General Body Meeting there. They could have provided proper bundobust. They did not provide it. On the other hand it would appear that the police to-day are subserving these rowdies bysupporting their actions, I would like to know if as a result whether very soon there will not be serious facist tendencies developing in this City and whether the government will be a party to it or whether it will encourage such tendencies. Now we find to-day that the Chief Minister has supported the action of these rowdies.He has not come up hard on that group. Why ? I do not know. I take it that the Chief Minister is not under their thumb. The police we find are under their thumb. The police are afraid of them. The Marshall of this place is afraid of them.

SRI K. BHASKAR NAIDU .— I will put it down with all power. I would not care to the party.

SRI MICHAEL B. FERNANDEZ .— I will take his word. All the same we get this feeling. This is my feeling. I will be very happy if the Chief Minister pulls them up, and puts them behind the bars, not just pulls them up. Now the point is that whether a trade union is run by Marxist or Socialist or Congress (I) men, it does not become a Marxist or a Socialist or a Congress (I) union. And even if it does become one it has its rights. No one can say that the Marxist union should not hold a General Body Meeting there. Every one has a right and police have denied the permission to use the public ground. Therefore, they have used the private ground. I think the police

should not have come in the way. I have only one request to make to our Chief Minister. You please ensure that the Police honour their pledge, that they honour their uniform. They are there to carry out a certain function. They will bring a good name only if they do so. Otherwise we will have to take it that the police is of no use to us and the police are there to protect rowdies and the people will have to protect themselves by other methods. This will certainly bring a bad name to the administration and I want the Chief Minister to make a positive statement on this.

ಶ್ರೀ ಎಚ್. ಗಂಗಾಧರನ್ (ಜಾಮರಾಜ)—ಮಾನ್ಯ ಅಧ್ಯಕ್ಷರೇ, ಒಂದು ರಾಜಕೀಯ ಪಕ್ಷದ ಮೇಲೆ ಮತ್ತೊಂದು ರಾಜಕೀಯ ಪಕ್ಷ ಧಾಳಿ ಮಾಡುವಂತಹ ಪ್ರಸಂಗವನ್ನು ನಮ್ಮ ಪ್ರಜಾಪ್ರಭುತ್ವದಲ್ಲಿ ಯಾವ ಪ್ರಜೆಯೇ ಆಗಲಿ, ಯಾವ ರಾಜಕೀಯ ಪಕ್ಷವೇ ಆಗಲೀ ಅಥವಾ ಯಾವ ಸರ್ಕಾರವೇ ಆಗಲೀ ಒಪ್ಪಬಾರದೆಂದು ನಾನು ಭಾವಿಸುತ್ತೇನೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಒಂದು ನಿರ್ದಿಷ್ಟವಾದಂಥ ಉತ್ತರ ಕೊಟ್ಟಿದ್ದಾರೆ. ಇನ್ನು ಮುಂದೆ ಇಂತಹ ದುರ್ಘಟನೆಗಳಿಗೆ ಅವಕಾಶ ಕೊಡುವುದಿಲ್ಲವೆಂಬ ಮಾತನ್ನು ಸಹ ಅವರು ಹೇಳಿದ್ದಾರೆ. ಇದರ ಜೊತೆಗೆ ಅವರು ಇನ್ನೊಂದು ಆಶ್ವಾಸನೆಯನ್ನು ಸಹ ಕೊಟ್ಟಿದ್ದಾರೆ. ಅದೇನೆಂದರೆ, ರಾಜಕೀಯ ಪಕ್ಷಗಳಿಗೆ ಕೊಟ್ಟಿರುವಂತಹ ಸ್ಥಳಗಳನ್ನು ಮತ್ತು ಸ್ಥಾನಮಾನಗಳನ್ನು ಕಿತ್ತುಕೊಳ್ಳುವುದಿಲ್ಲ ಎಂದು. ಈಗ ಈ ಒಂದು ಟ್ರಸ್ಟಿಗೆ ಕೊಟ್ಟಿದ್ದ ಜಾಗವು ದುರುಪಯೋಗವಾಗಿದೆ ಎಂಬ ಮಾತನ್ನು ಅವರು ಪ್ರಸ್ತಾಪ ಮಾಡಿದರು. ಆದರೆ ಬೇರೆ ರಾಜಕೀಯ ಪಕ್ಷಗಳಿಗೆ ಎಲ್ಲ ರೀತಿಯ ಸ್ಥಾನಮಾನಗಳನ್ನು ಕಲ್ಪಿಸಿಕೊಡುವ ಒಂದು ಅವಕಾಶವನ್ನು ಮಾಡಿಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಮತ್ತು ಆ ರೀತಿ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್.ಡಿ. ದೇವೇಗೌಡ—ತಮಗೂ ಬೇಕೇನು ?

ಶ್ರೀ ಎಚ್. ಗಂಗಾಧರನ್—ಬೇಕು ಸ್ವಾಮಿ, ನಾವು ಈ ಮೊದಲು ಇದ್ದಂಥ ರಾಜಕೀಯ ಪಕ್ಷದಿಂದ ಯಾವುದೇ ಒಂದು ಸ್ಥಿತ್ಯನ್ನಾಗಲೀ ಅಥವಾ ಒಂದು ಕಾಗದದ ಚೂರನ್ನಾಗಲೀ ತೆಗೆದುಕೊಳ್ಳದೇ ನೇರವಾಗಿ ಹೊರಗಡೆಗೆ ಬಂದು, ಈಗ ಒಂದು ಬೇರೆ ಪಕ್ಷವನ್ನು ನಿರ್ಮಾಣ ಮಾಡುತ್ತಿದ್ದೇವೆ. ಈ ರಾಷ್ಟ್ರದಲ್ಲಿ ನಾವು ಈ ಒಂದು ಆದರ್ಶವನ್ನು ತೋರಿಸಿದ್ದೇವೆ. ಇದೇ ಆದರ್ಶವನ್ನು ಎಲ್ಲ ರಾಜಕೀಯ ಪಕ್ಷಗಳೂ ತೋರಿಸಿ ಕೊಡಬೇಕು. ಇದೇ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಮಾತನ್ನು ವಿನಂತಿ ಮಾಡಿಕೊಳ್ಳಬೇಕಾಗಿದೆ. ಅದೇನೆಂದರೆ, ಇಂತಹ ಘಟನೆಗಳು ನಡೆದಾಗ, ನಾವು ಇಲ್ಲಿ ಪ್ರಸ್ತಾಪ ಮಾಡುವಂತಹ ಸಮಯದಲ್ಲಿ ರಾಜಕೀಯ ಬೆರೆಸಿ ಮಾತನಾಡುತ್ತೇವೆ. ಅಂದರೆ ಇದರಲ್ಲಿ ನಮ್ಮಿಂದೂ ದೋಷವಿದೆ ಎಂಬ ಮಾತನ್ನೂ ಹೇಳಬೇಕಾಗುತ್ತದೆ. ಇದೇ ಕಾರಣದಿಂದ ಇಂತಹ ಘಟನೆಗಳ ಬಗ್ಗೆ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಒಂದು ದಿಟ್ಟತನದಿಂದ ಹಾಗೂ ಸ್ವಲ್ಪ ಕೋಪೋದ್ರೇಕದಿಂದ ಉತ್ತರ ಕೊಡುತ್ತಾರೆ. ಇದಕ್ಕೆ ಕಾರಣವೇನೆಂದರೆ, ಇದರಲ್ಲಿ ಎರಡು ಅಂಶಗಳು ಸೇರಿರುತ್ತವೆ. ಒಂದು, ನಾವು ನಡೆದಂಥ ಘಟನೆಯ ಬಗ್ಗೆ ಮಾತ್ರ ನಾವು ಉತ್ತರ ಕೇಳಿದೆ, ಮುಖ್ಯಮಂತ್ರಿಗಳೇ ಹೇಳಿದಂತೆ ನಾವು ಇದರಲ್ಲಿ ರಾಜಕೀಯ ಬೆರೆಸುತ್ತೇವೆ. ಈ ರೀತಿ ಯಾವುದೇ ಒಂದು ಘಟನೆಯ ಬಗ್ಗೆ ಟೀಕೆ ಮಾಡುವಂತಹ ಸಂದರ್ಭದಲ್ಲಿ ನಾವು ವಕ್ರೋಕ್ತಿಯನ್ನು ಆಡಿದಾಗ, ಮುಖ್ಯ ಮಂತ್ರಿಗಳಿಗೆ ಕೋಪ ಬಂದು, ಆ ಒಂದು ವಕ್ರೋಕ್ತಿಯ ಬಗ್ಗೆಯೇ ಅವರು ಬಹುಮತ ಕೊಟ್ಟು ಉತ್ತರ ಕೊಡುವಂತಹ ಸಂದರ್ಭದಲ್ಲಿ ಅವರಿಗೆ ಬೇರೆ ಅಂಶಗಳು ಮರೆತು ಹೋಗಿರುತ್ತದೆ. ನಾವು ಅನೇಕ ಅಂಶಗಳನ್ನು ಇಲ್ಲಿ ಪ್ರಸ್ತಾಪ ಮಾಡಿರುತ್ತೇವೆ. ಆದರೆ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಇಂತಹ ದುರಾಚಾರಗಳು ಇನ್ನು ಮುಂದೆ ನಡೆಯದಂತೆ ನೋಡಿಕೊಳ್ಳುತ್ತೇವೆಂದು ಹೇಳುತ್ತಾರೆ. ಆದರೆ ಅವರೂ ಸಹ ಈ ನಮ್ಮ ವಕ್ರೋಕ್ತಿಯ ಬಗ್ಗೆಯೇ ಉಗ್ರವಾಗಿ ಟೀಕೆ ಮಾಡುವಂತಹ ಸಂದರ್ಭದಲ್ಲಿ ಅದು ಮಾತ್ರ ಹೆಚ್ಚು ಪ್ರಚಲಿತವಾಗಿರುತ್ತದೆ, ಬೇರೆ ಅಂಶಗಳು ಮರೆತು ಹೋಗಿರುತ್ತವೆ. ಇದರಿಂದ ಏನಾಗುತ್ತದೆಂದರೆ, ಇವರ ಪಕ್ಷದ ಕಾರ್ಯಕರ್ತರು ಇಂತಹ ಕೆಲಸ ಮಾಡಲು ತಮಗೆ ಮುಖ್ಯಮಂತ್ರಿಗಳ ಬೆಂಬಲ ಇದೆ,

ನಮಗೆ ಮುಖ್ಯಮಂತ್ರಿಗಳು ಸಹಕಾರಿಯಾಗಿದ್ದಾರೆಂಬ ಭಾವನೆಯನ್ನು ಇಟ್ಟುಕೊಂಡು, ಈ ಒಂದು ರಾಷ್ಟ್ರ ಮಟ್ಟದ ರಾಜಕೀಯ ಪಕ್ಷಕ್ಕೆ ಅವರು ಅಗೌರವ ತರುತ್ತಾರೆ; ಮುಖ್ಯಮಂತ್ರಿಗಳಿಗೆ ಅಗೌರವ ತರುತ್ತಾರೆ ಹಾಗೂ ರಾಜ್ಯ ಸರ್ಕಾರಕ್ಕೆ ಅಗೌರವ ತರುತ್ತಾರೆ. ಆದಕಾರಣ ತಾವು ಇಂತಹ ಘಟನೆಗಳು ನಡೆಯದಂತೆ ತಾವು ನೋಡಿಕೊಳ್ಳಬೇಕಾಗುತ್ತದೆ. ಮತ್ತು ತಮ್ಮ ಪಕ್ಷದ ಕಾರ್ಯಕರ್ತರು ಏನಾದರು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇ ಆದರೆ ಅವರ ಮೇಲೆ ನಿರ್ದಿಷ್ಟವಾದಂಥ ಕ್ರಮ ಕೈಗೊಳ್ಳಬೇಕಾಗುತ್ತದೆಂದು ತಾವು ತಮ್ಮ ಪಕ್ಷದ ಸಭೆಯಲ್ಲಿ ಹಾಗೂ ಈ ಸದನದಲ್ಲಿ ಘೋಷಣೆ ಮಾಡಬೇಕು. ಇಲ್ಲದಿದ್ದರೆ ಇಂತಹ ಕಾರ್ಯಕ್ರಮಕ್ಕೆ ತಮ್ಮ ಬೆಂಬಲ ಇದೆ ಎಂದು ಅವರು ಭಾವಿಸಿಕೊಳ್ಳುತ್ತಾರೆ. ಇಲ್ಲಿ ನಾವು ಮಾತನಾಡುವಾಗ ಟೀಕೆ ಮಾಡತಕ್ಕಂಥ ಅಂಶಗಳೇ ಹೆಚ್ಚಾದಾಗ, ತಾವು ಅದಕ್ಕೆ ಸಂಬಂಧಪಟ್ಟಂತೆ ಮಾತ್ರ ಉತ್ತರ ಕೊಡುತ್ತೀರಿ. ಬೇರೆ ಇಂತಹ ಅಂಶಗಳಿಗೆ ಉತ್ತರ ಕೊಡುವುದು ತಮಗೆ ಮರೆತು ಹೋಗಿರುತ್ತದೆ. ಇದರಿಂದ ಮುಂದೆ ನಿಮ್ಮ ಪಕ್ಷದ ಕಾರ್ಯಕರ್ತರು ಮಾಡತಕ್ಕಂಥ ಚಟುವಟಿಕೆಗಳು ನಿಮ್ಮ ಪಕ್ಷದ ಮೇಲೂ ಮತ್ತು ಈ ರಾಜ್ಯದ ಸಂಸ್ಕೃತಿಯ ಮೇಲೂ ಕೆಟ್ಟ ಅಪಘಾತವನ್ನು ಉಂಟು ಮಾಡುತ್ತದೆ. ಆದಕಾರಣ ಯಾವುದೇ ರಾಜಕೀಯ ಪಕ್ಷದ ಕಾರ್ಯಕರ್ತರಾಗಲೀ, ತಮ್ಮ ಒಂದು ಹೆಸರನ್ನು ದುರುಪಯೋಗಪಡಿಸಿಕೊಂಡು ಇಂತಹ ಕೆಲಸಗಳನ್ನು ಮಾಡಿದರೆ ಮತ್ತು ತಮ್ಮ ಹೆಸರಿಗೆ ಮಸಿ ಬಳಿಯಲು ಹೊರಟರೆ, ಅದು ಪಕ್ಷ ದ್ರೋಹವಾಗುತ್ತದೆಂಬ ಎಚ್ಚರಿಕೆಯನ್ನು ತಾವು ಕೊಡಬೇಕು. ಎಲ್ಲ ರಾಜಕೀಯ ಪಕ್ಷಗಳೂ ಈ ಒಂದು ಜವಾಬ್ದಾರಿಯನ್ನು ಹೊತ್ತಿವೆ ಎಂದು ನಾನು ಭಾವಿಸುತ್ತೇನೆ. ಈಗ ಈ ಒಂದು ಘಟನೆ ಏನು ನಡೆದಿದೆ. ಇದು ಒಂದು ಪಕ್ಷದ ಆದೇಶದಂತೆ ನಡೆದಿದೆ ಎಂದು ನಾನು ಭಾವಿಸುವುದಕ್ಕೆ ತಯಾರಿಲ್ಲ. ಆದರೂ ಒಂದು ಪಕ್ಷದ ಕಾರ್ಯಕರ್ತರು ಏನಾದರೂ ಅವಿವೇಕದಿಂದ ಇಂತಹ ಕೃತ್ಯವನ್ನು ನಡೆಸಿದ್ದರೆ, ಅವರು ಖಂಡನಾರ್ಹರೆಂದು ಹೇಳಿ, ಇನ್ನು ಮುಂದೆ ಯಾವುದೇ ರಾಜಕೀಯ ಪಕ್ಷದ ಮೇಲೆ ಇಂತಹ ಕೃತ್ಯ ನಡೆಯದಂತೆ ತಾವು ನೋಡಿಕೊಳ್ಳಬೇಕು ಮತ್ತು ರಕ್ಷಣೆ ಕೊಡಬೇಕೆಂದು ವಿನಂತಿ ಮಾಡಿಕೊಂಡು, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮ್ಮನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಚ್.ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ, ಈ ವಿಷಯ ನೆನ್ನೆ ದಿವಸ ವಿಧಾನ ಪರಿಷತ್ತಿನಲ್ಲಿ ಪ್ರಸ್ತಾಪವಾಗಿದೆ. ಇವೊತ್ತು ಈ ಸದನದಲ್ಲಿ ಗಮನ ಸೆಳೆಯುವ ಸೂಚನೆಯ ಮೂಲಕ ಈ ವಿಷಯ ಇಲ್ಲಿ ಪ್ರಸ್ತಾಪಕ್ಕೆ ಬಂದಿದೆ. ಮೊನ್ನೆ ನಡೆದಂಥ ಈ ಒಂದು ಪ್ರಕರಣ ಏನಿದೆ, ಈ ಪ್ರಕರಣದ ಬಗ್ಗೆ ನಾನು ಪ್ರಾಮಾಣಿಕವಾಗಿ ಹೇಳುವುದಾದರೆ, ಬಹುಶಃ ಇಲ್ಲಿಯವರೆಗೆ ಈ ಸರ್ಕಾರ ಎಷ್ಟೇ ಒಳ್ಳೆಯ ಕೆಲಸಗಳನ್ನು ಮಾಡಿದ್ದರೂ ಸಹ, ಈ ಒಂದು ಘಟನೆಯಿಂದ ಈ ಸರ್ಕಾರದ ಮೇಲೆ ಸಾಕಷ್ಟು ಕಪ್ಪುಚುಕ್ಕೆ ಹತ್ತುತ್ತದೆಂದು ಹೇಳಬೇಕಾಗುತ್ತದೆ. ಜನತಂತ್ರದ ಒಂದು ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳು, ಅವು ಅಧಿಕಾರದಲ್ಲಿರಲಿ ಅಥವಾ ವಿರೋಧ ಪಕ್ಷದಲ್ಲಿರಲಿ, ಅವುಗಳು ನಿರ್ಭಯದ ವಾತಾವರಣದಲ್ಲಿ ತಮ್ಮ ಕಾರ್ಯಗಳನ್ನು ನಡೆಸಿಕೊಂಡು ಹೋಗುವುದಕ್ಕೆ ಯಾವುದೇ ತರಹದ ಅಡೆತಡೆಗಳು ಇರಬಾರದು. ಇದೇ ಉದ್ದೇಶವಿಟ್ಟುಕೊಂಡು ಮಾನ್ಯ ಮುಖ್ಯಮಂತ್ರಿಗಳು ಜನತಂತ್ರದ ಒಂದು ವ್ಯವಸ್ಥೆಯಲ್ಲಿ ವಿರೋಧ ಪಕ್ಷದವರ ಪಾತ್ರ ಬಹಳ ಪ್ರಾಮುಖ್ಯವಾದುದೆಂದು ಈ ಸಭೆಯಲ್ಲಿ ಹಾಗೂ ಹೊರಗಡೆಯಲ್ಲಿ ಅನೇಕ ಸಲ ಹೇಳಿದ್ದಾರೆ. ಆದರೆ ಮೊನ್ನೆ ನಡೆದ ಒಂದು ಘಟನೆಯಿಂದ ಈ ಸರ್ಕಾರದ ಮೇಲೆ ಜನತೆಯಲ್ಲಿ ಸಾಕಷ್ಟು ತಪ್ಪು ಅಭಿಪ್ರಾಯ ಬರುವುದಕ್ಕೆ ಸಾಧ್ಯವಾಗಿದೆ ಎಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈ ಸಂಬಂಧದಲ್ಲಿ ಒಂದು ವಿಷಯ ಹೇಳಬೇಕಾಗುತ್ತದೆ. ಅದೇನೆಂದರೆ, ಇದೇ ಜಾಗವನ್ನು ನಿರ್ಣಯಕ್ಕೆ ತಗೆದುಕೊಳ್ಳಲು ಸರ್ಕಾರದವರು ಕಾಂಗ್ರೆಸ್ ಪಕ್ಷದ ಪ್ರದರ್ಶನ ನಡೆಸಲು ೨೯ ವರ್ಷದ ಗುತ್ತಿಗೆ ಮೇಲೆ ಕೊಡಬೇಕೆಂದು ನಿರ್ಣಯ ಮಾಡಲು ಹೊರಟಾಗ, ಇದು ಹೆಚ್ಚು ಬೆಲೆ ಬಾಳುವ ಆಸ್ತಿ, ನಗರದ ಒಂದು ಪ್ರಮುಖವಾದಂಥ ಜಾಗವಲ್ಲರುವಂತಹ ಆಸ್ತಿ, ಕಾರ್ಪೊರೇಷನ್‌ಗೆ ಸಂಬಂಧಪಟ್ಟಂತಹ ಆಸ್ತಿಯಾದ ಕಾರಣ, ಈ ಸಾರ್ವಜನಿಕರ ಸ್ವತ್ತನ್ನು ಯಾವ ಒಂದು ರಾಜಕೀಯ ಪಕ್ಷಕ್ಕೂ ಗುತ್ತಿಗೆ ಮೇಲೆ ಕೊಡಬಾರದೆಂದು ಆಗ ಈ ಸಭೆಯಲ್ಲಿ ಸದಸ್ಯರಾಗಿದ್ದಂತಹ ಮಾನ್ಯ ಸಾವುಕಾರ ಚೆನ್ನಯ್ಯನವರು, ಮಾನ್ಯ ದಯಾನಂದಸಾಗರ್ ಅವರು ಮಾನ್ಯ ದೇವರಾಜ ಅರಸ್ ಅವರು ಸರ್ಕಾರದ ಮೇಲೆ ಒತ್ತಾಯ ತಂದರು. ಆಗ ಮಾನ್ಯ ದೇವರಾಜ ಅರಸ್ ಅವರು ಕಾಂಗ್ರೆಸ್ (ಆರ್) ಪಕ್ಷದ ಅಧ್ಯಕ್ಷರಾಗಿದ್ದರು. ಈ ವಿಷಯ ಮೊದಲು ತೀರ್ಮಾನವಾಗಬೇಕೆಂದು ಆ ದಿವಸ ಈ ಸಭೆಯ ಕಾರ್ಯಕಲಾಪ ನಡೆಸಲು ಬಿಡಲಿಲ್ಲ. ಅನಂತರ ರಾತ್ರಿ ೯ ಗಂಟೆಯವರೆಗೆ ಈ ಸಭೆಯ ಕಲಾಪವನ್ನು ನಡೆಸಿ ಈ ವಿಷಯವನ್ನು ಅಂತ್ಯಗೊಳಿ

ಸಿದ್ದು ತಮಗೂ ಜ್ಞಾಪಕವಿರಬಹುದು, ಆದಕಾರಣ ಕೋಟ್ಯಾಂತರ ರೂಪಾಯಿಗಳಷ್ಟು ಬೆಲೆ ಬಾಳುವ ಈ ಆಸ್ತಿಯನ್ನು ಹೀಗೆ ಈ ಒಂದು ಟ್ರಸ್ಟ್‌ಗೆ ಪಹಿಸಲಾಯಿತು ಮತ್ತು ಇದರ ಬಗ್ಗೆ ಸರ್ಕಾರ ಯಾವಾಗ ನಿರ್ಣಯ ಮಾಡಿತು ಎಂಬತಕ್ಕಂಥ ಪೂಹಿತಿ ನಮಗೆ ಬೇಕು. ಏಕೆಂದರೆ, ಇದೇ ನಮಗೆ ಪ್ರಮುಖ ವಾದಂಥ ವಿಷಯ. ಈ ಒಂದು ಟ್ರಸ್ಟ್‌ಗೆ ಯಾರು ಯಾರು ಟ್ರಸ್ಟಿಗಳು ಇದ್ದಾರೆ, ಈ ಟ್ರಸ್ಟ್ ಯಾವ ಒಂದು ಉದ್ದೇಶಕ್ಕೋಸ್ಕರ ರಚನೆಯಾಯಿತು ಎಂಬ ವಿವರಗಳು ನಮಗೆ ಬೇಕಾಗುತ್ತದೆ. ಏಕೆಂದರೆ, ಈ ಒಂದು ಟ್ರಸ್ಟ್‌ನವರು ಮತ್ತೊಂದು ರಾಜಕೀಯ ಪಕ್ಷಕ್ಕೆ ಆ ಜಾಗದ ಒಂದು ಭಾಗವನ್ನು ಬಾಡಿಗೆ ಮೇಲೆ ಕೊಟ್ಟಿರಬಹುದು, ಇಲ್ಲವೇ ಕಾಂಗ್ರೆಸ್ (ಯು) ಕಛೇರಿಯನ್ನು ಅಲ್ಲಿ ನಡೆಸಿ ಎಂದು ಈ ಟ್ರಸ್ಟ್‌ನವರು ಕೊಟ್ಟಿರಬಹುದು ಅಥವಾ ಈ ಟ್ರಸ್ಟ್‌ನ ಸದಸ್ಯರೊಬ್ಬರು ಕೊಟ್ಟಿರಬಹುದು ಇದರ ಜೊತೆಗೆ, ಆ ಜಾಗದ ಒಂದು ಭಾಗವನ್ನು ಸಿ.ಪಿ.ಎಂ.ನವರಿಗೂ ಬರೆದುಕೊಟ್ಟಿರಬಹುದು. ಆದಕಾರಣ ನಮಗೆ ಸರ್ಕಾರದವರು ಇದರ ಬಗ್ಗೆ ಪೂರ್ಣವಾದಂಥ ವಿವರಣೆಯನ್ನು ಕೊಡಬೇಕಾಗುತ್ತದೆ. ಕಾಂಗ್ರೆಸ್ (ಯು) ಪಕ್ಷದವರು ಅಧಿಕಾರ ಬಿಟ್ಟ ಮೇಲೆ, ಅದೇ ಪಕ್ಷದ ಕಛೇರಿ ಕೆಲಸ ಅಲ್ಲಿ ನಡೆದಿದೆ. ಪ್ರತಿಯೊಬ್ಬರೂ ನೋಡಿದ್ದಾರೆ. ಒಂದು ವೇಳೆ ಟ್ರಸ್ಟ್‌ಯಿಂದ ಅವರಿಗೆ ಏನಾದರೂ ಕೆಲವು ಭಾಗವನ್ನು ಬಾಡಿಗೆಗೆ ಕೊಟ್ಟಿದ್ದಾರಾ. ಕೊಟ್ಟಿದ್ದರೆ ಯಾವ ಕರಾರು ಮೇಲೆ ಕೊಟ್ಟಿದ್ದಾರೆ, ಅದರ ಬಗ್ಗೆ ವಿವರಣೆ ಬೇಕಾಗುತ್ತದೆ ಅಲ್ಲಿ ಕಾಂಗ್ರೆಸ್–ಯು ಕಛೇರಿ ನಡೆಯುತ್ತಿತ್ತು, ಎಲ್ಲರೂ ಒಪ್ಪಿಕೊಳ್ಳಬೇಕಾಗುತ್ತದೆ. ಪ್ರತಿಯೊಬ್ಬರಿಗೂ, ಸಾರ್ವಜನಿಕರಿಗೂ ಬಹಿರಂಗವಾಗಿ ಅದರ ಕಛೇರಿ ನಡೆದುಕೊಂಡು ಬಂದಿರ ತಕ್ಕಂಥಾದ್ದು ಗೊತ್ತಿದೆ. ಇದರ ಬಗ್ಗೆ ಜಿಜ್ಞಾಸೆ ಏಕೆ ಬೇಕು–ಎನ್ನುವ ಪ್ರಶ್ನೆ ಇದೆ. ಟ್ರಸ್ಟ್‌ನಿಂದ ಸಿ.ಪಿ.ಎಂ.ನವರು ಒಂದು ಭಾಗವನ್ನು ನಡೆಸಿಕೊಳ್ಳಿ, ಫ್ಯಾಕ್ಟರಿ ವರ್ಕರ್ಸ್ ನಡೆಸಿಕೊಳ್ಳಿ ಎಂದು ಬರೆದು ಕೊಟ್ಟಿದ್ದಾರೆ. ಏಕೆ ಈ ಸಮಸ್ಯೆ ಬಂತು ಎನ್ನುವುದು ಪ್ರಶ್ನೆ. ಈ ಸರ್ಕಾರ ಬಂದು ಒಂದೂಕಾಲು ವರ್ಷ ಆದಮೇಲೆ ಆ ಜಾಗದ ಒಡೆತನದ ಬಗ್ಗೆ, ಪ್ರಶ್ನೆ, ಸಮಸ್ಯೆ ಉದ್ಭವವಾಗಿ ಬೀಗ ಹಾಕುವಂಥ ಪರಿಸ್ಥಿತಿಗೆ ಬರುವುದಕ್ಕೆ ಕಾರಣವೇನು, ಅದನ್ನು ಸಭೆಗೆ ತಿಳಿಸಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು, ಗೃಹ ಮಂತ್ರಿಗಳೂ ಆಗಿರುವುದರಿಂದ ಇದರ ಬಗ್ಗೆ ತಿಳಿಸಬೇಕಾಗುತ್ತದೆ. ಆದರ ಒಡೆತನದ ಬಗ್ಗೆ ಅಲ್ಲಿರತಕ್ಕವರಲ್ಲಿ, ಅಂದರೆ ಟ್ರಸ್ಟ್‌ನಲ್ಲಿ ಯಾರಿದ್ದಾರೆ ಅವರಲ್ಲಿ ಜಿಜ್ಞಾಸೆ ಬಂದು ಒಂದೊಂದು ಭಾಗವನ್ನು ಒಬ್ಬೊಬ್ಬರಿಗೆ ಕೊಟ್ಟಿದ್ದು, ಮಾಲೀಕತ್ವದ ಬಗ್ಗೆ ಅನುಮಾನ ಬಂದರೆ ಆ ಸಂದರ್ಭದಲ್ಲಿ ಸರ್ಕಾರ ಪ್ರವೇಶ ಮಾಡಿದೆ ಎಂದು ಹೇಳಬೇಕಾಗುತ್ತದೆ. ಇವೆಲ್ಲದರ ಬಗ್ಗೆ ಈ ಸಭೆಗೆ ಸರ್ಕಾರ ವಿವರಣೆ ಕೊಟ್ಟರೆ, ಸರ್ಕಾರ ತೆಗೆದುಕೊಂಡಿರತಕ್ಕ ನಿರ್ಧಾರದಲ್ಲಿ ವಿಶ್ವಾಸ ಬರಲಿಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಬೊಮ್ಮಾಯಿಯವರೂ ಕೂಡ ಇದರ ಬಗ್ಗೆ ಹೇಳಿದ್ದಾರೆ. ಕಾಂಗ್ರೆಸ್–ಓ ಇದ್ದಾಗ ಮಾನ್ಯ ದೇವರಾಜ ಅರಸ್ ಮುಖ್ಯ ಮಂತ್ರಿಗಳಾಗಿದ್ದಿಲ್ಲ. ಶ್ರೀಮಾನ್ ಧರ್ಮವೀರ ಅವರು ಅಧಿಕಾರದಲ್ಲಿದ್ದರು, ರಾಷ್ಟ್ರಪತಿಯವರ ಆಡಳಿತವಿತ್ತು. ಶ್ರೀಮಾನ್ ವೀರೇಂದ್ರ ಪಾಟೀಲರ ಸರ್ಕಾರ ಹೋದ ಮರುಕ್ಷಣ ಈ ಒಂದು ಆಸ್ತಿಮೇಲೆ ಕಣ್ಣು ಬಿತ್ತು. ಆವಾಗ ಯಾರು ಪ್ರಮುಖರು ಕಾಂಗ್ರೆಸ್–ಆರ್‌ನಲ್ಲಿದ್ದು ಕಾಂಗ್ರೆಸ್-ಯಂನಲ್ಲಿದ್ದಾರೆ ಅವರ ಪ್ರಭಾವ ಹೆಚ್ಚಿತ್ತು, ಆಡಳಿತದ ಮೇಲೆ. ಆ ಒಂದು ಆಸ್ತಿಯನ್ನು ಕಬಳಿಸತಕ್ಕ ಪ್ರಯತ್ನ ಏನಿತ್ತು ಅದರ ಬಗ್ಗೆ ಹೈಕೋರ್ಟಿನಲ್ಲಿ ನಿರ್ಣಯವಾಗಿದೆ. ನಾನು ಹೇಳುವುದೇ ನೆಂದರೆ, ಅವರು ಮಾಡಿದ್ದನ್ನೇ ನಾನೂ ಮುಂದುವರಿಸಿಕೊಂಡು ಹೋಗುತ್ತೇನೆ ಎಂಬ ನಿಲುವು ನಿಮ್ಮಲ್ಲಿ ಬರಬಾರದು. ತಾವು ಇದುವರೆಗೆ ಆ ಧಾಟಿಯಲ್ಲಿ ಹೋಗುವುದಿಲ್ಲ ಎಂದು ಹೊರಗಡೆ, ಒಳಗಡೆ ಹಲವು ಸಾರಿ ಹೇಳಿದ್ದೀರಿ. ಅದು ನಿಮಗೆ ಮಾರ್ಗದರ್ಶನವಾಗಬಾರದು. ಚಾಕು ಚೂರಿ ಬಗ್ಗೆ ಮಾತನಾಡಿದ್ದೀರಿ. ಹಿಂದೆಯೆಲ್ಲಾ ಗರೀಬಿ ಹಠಾವೊ, ಇಂದಿರಾ ಬ್ರಿಗೇಡ್ ಎಲ್ಲಾ ನಡೆದಿದೆ. ಮಾನ್ಯ ಪೈಕೇಲ್ ಫರ್ನಾಂಡೀಸ್ ಅವರು ಹೇಳಿದರು. ಮಾನ್ಯ ಜೀವರಾಜ ಆಳ್ವ ಅವರು ಇಲ್ಲೇ ಇದ್ದಾರೆ, ಕಾಂಗ್ರೆಸ್–ಯಂ ನಲ್ಲಿದ್ದಾರೆ. ಶ್ರೀಮತಿ ಇಂದಿರಾಗಾಂಧಿಯವರು ಬಂದಾಗ ನಾವು ಪ್ರದರ್ಶನ ಮಾಡಬೇಕು ಅಂದಾಗ ತನಗಿರತಕ್ಕ ಅಧಿಕಾರವನ್ನು ಯಾರು ಮೊಟಕುಗೊಳಿಸಿದರು ಗೊತ್ತಿದೆ. ಪೋಲೀಸ್ ಕಮಿಷನರು ಜಾಗ ವನ್ನು ಗಂರುತುಮಾಡಿ ನೀವು ಇಂಥಾ ಕಡೆ ನಿಂತು ನಿಮ್ಮ ಅತೃಪ್ತಿಯನ್ನು, ಆಸಮಾಧಾನವನ್ನು ವ್ಯಕ್ತ ಪಡಿಸಿ ಎಂದು ಹೇಳಿದರು. ಆಮೇಲೆ ಸೆಕ್ಷನ್ ೩೦೨, ಅಟೆಂಪ್ಟೆಡ್ ಮರ್ಡರ್ ಕೇಸ್ ಹಾಕಿದರು. ಇವತ್ತು ಚಾಕು ಚೂರಿ ಬಗ್ಗೆ ಹೇಳಿದ್ದಾರೆ. ದಯಮಾಡಿ ಮುಖ್ಯ ಮಂತ್ರಿಗಳಿಗೆ ಒಂದು ಮಾತು. ನೀವು ಯಾವ ಹಚನ ಕೊಟ್ಟು ಅಧಿಕಾರಕ್ಕೆ ಬಂದಿದ್ದೀರೋ, ನಾನು ಹಿಂದೆ ನಡೆದಹಾಗೆ ಏನನ್ನೂ ನಡೆಸುವುದಿಲ್ಲ ಎಂದು ಹೇಳಿದ್ದೀರೋ, ಎಂತಹ ಕಾರ್ಯಚಟುವಟಿಕೆಗಳಿಗೆ ರಕ್ಷಣೆ ಕೊಡಬೇಕು ಎಂದು ಹೇಳಿದ್ದೀರೋ, ಯಾವರೀತಿ

ನಿರ್ಧಯದ ವಾತಾವರಣದಲ್ಲಿ ಅವರವರ ಪಕ್ಷದ ಕಾರ್ಯಾಚರಣೆಗಳನ್ನು ನಡೆಸಿಕೊಳ್ಳುವ ಬಗ್ಗೆ ಹೇಳಿದ್ದೀರೋ ಅದಕ್ಕೆ ಕಟ್ಟುಬದ್ಧರಾಗಿದ್ದೀರಿ ಎಂದು ನಾನು ಆಶಿಸುತ್ತೇನೆ. ಈ ಒಂದೂಕಾಲು ವರ್ಷ ಆದ ಮೇಲೆ ಆ ಜಾಗದ ಬಗ್ಗೆ ಜಿಜ್ಞಾಸೆ ಏಕೆ ಬಂತು? ಟ್ರಸ್ಟ್‌ನಲ್ಲಿ ಜಿಜ್ಞಾಸೆ ಇದೆಯೇ, ಸಿ.ಪಿ.ಐ, ಸಿ.ಪಿ.ಎಂ, ಕಾಂಗ್ರೆಸ್-ಐಗೆ ಬರೆದುಕೊಟ್ಟಿದ್ದಾರಾ. ಈ ಬಗ್ಗೆ ಪೂರ್ಣ ವಿವರಗಳನ್ನು ಸಭೆಗೆ ಕೊಡುವುದರ ಮುಖಾಂತರ ಈ ಸಮಸ್ಯೆ, ಬಂದಿರತಕ್ಕ ಅನುಮಾನವನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಸರ್ಕಾರದಿಂದ ಅಪೇಕ್ಷಿಪಡುತ್ತೇನೆ. ಇದರ ಬಗ್ಗೆ ವಿವರಣೆಗಳನ್ನು ಕೊಡಬೇಕು ಎಂದು ಕೇಳುತ್ತೇನೆ.

† ಶ್ರೀ ಆರ್. ಗುಂಡೂರಾವ್ (ಮಾನ್ಯ ಮುಖ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಸಾಕಷ್ಟು ವಿಷಯವನ್ನು ಹೇಳಿದ್ದೇನೆ. ಮತ್ತೆ ಪುನಃ ಇದರ ಬಗ್ಗೆ ಚರ್ಚೆಯಾಗಿದೆ. ಇದರಲ್ಲಿ ಎಲ್ಲರ ಅಭಿಪ್ರಾಯದಲ್ಲೂ ವಿಷಯ ಇಷ್ಟೆ. ಏನೆಂದರೆ, ಈ ಜಾಗ ಹೇಗೆ ಬಂತು, ಅವರ ಅಭಿಪ್ರಾಯ ಏನು ಎಂದು ಕೇಳಿದ್ದಾರೆ. ನಾನು ಸ್ಟೇಟ್‌ಮೆಂಟಿನಲ್ಲಿ ಹೇಳಿರುವ ಹಾಗೆ, ಕಾಂಗ್ರೆಸ್ (ಯು) ಆಫೀಸಿನ ಜಾಗ ಆಮೇಲೆ, ಅದಕ್ಕೆ ಯಾವುದೇ ರೀತಿಯ ಆಧಾರ ಇಲ್ಲ ಎಂದು ಹೇಳಿದ್ದೇನೆ. ಇದು ಒಂದು ಟ್ರಸ್ಟ್‌ನ ಅಂದರೆ ಹಿರಣ್ಣಯ್ಯ ಮಿತ್ರಮಂಡಲಿಯವರಿಗೆ ೫ ವರ್ಷದಲ್ಲಿ ಕಟ್ಟಡ ಕಟ್ಟಬೇಕು, ಕಟ್ಟಕೊಳ್ಳದೇಹೋದರೆ ಇದನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಹೇಳುವಂಥ ನಿಬಂಧನೆ ಮೇಲೆ ಅವರಿಗೆ ಕೊಟ್ಟಿದ್ದಾರೆ. ಅವರು ಐದು ವರ್ಷಗಳಲ್ಲಿ ಕಟ್ಟಡ ಕಟ್ಟಲಿಲ್ಲ. ಆಮೇಲೆ ಅದನ್ನು ಕ್ಯಾನ್ಸಲ್ ಮಾಡಿದ್ದಾರೆ. ೮ನೇ ಜನವರಿ ೧೯೮೦ರಲ್ಲಿ ಕ್ಯಾನ್ಸಲ್‌ಮಾಡಿ ಅದೇ ದಿವಸ ಈ ಟ್ರಸ್ಟ್‌ಗೆ ಕೊಟ್ಟಿದ್ದಾರೆ. ಒಂದು ಎಕರೆ ೨೫ ಗುಂಟೆ ಜಾಗವನ್ನು ಶ್ರೀ ಚಾಮುಂಡೇಶ್ವರಿ ಟ್ರಸ್ಟ್‌ಗೆ ೫೦ವರ್ಷಗಳಿಗೆ ಕೊಟ್ಟಿದ್ದಾರೆ. ಅದಕ್ಕೆ ತಿಂಗಳಿಗೆ೬೦೦ ರೂಪಾಯಿ ಬಾಡಿಗೆ. ಇದನ್ನು ದೇಶದಲ್ಲಿ ಜನ ನಂಬಿಕೊಳ್ಳುತ್ತಾರೇನು? ಜಾಗ ಕೊಟ್ಟಿದ್ದರ ಬಗ್ಗೆ ಹೈಕೋರ್ಟಿನಲ್ಲಿ ಕೇಸು ಇದೆ. ನಮ್ಮ ಸರ್ಕಾರ ಬಂದಮೇಲೆ ದೇಶದ ಜನರಿಗೆ ಬಿಡುತ್ತೇನೆ. ಯಾರು ಒಳ್ಳೆಯ ಸರ್ಕಾರ ಮಾಡಿದ್ದಾರೆ. ಎನ್ನುವುದನ್ನು ಜನತೆ ಅಳತೆ ಮಾಡಿದ್ದಾರೆ. ಮುಂದೇನೂ ಮಾಡುತ್ತಾರೆ. ಅದರ ಬಗ್ಗೆ ಮಾನ್ಯ ಬೊಮ್ಮಾಯಿಯವರು ಹೇಳಿದರು; ಜನಗಳ ಮುಂದೆ ಸರ್ಕಾರ ಮಾಡಿರುವ ಸಾಧನೆಗಳನ್ನು ಹೇಳುತ್ತೇನೆ. ಇದು ಒಂದೇ ಸಾಕು. ಯಾವ ಸರ್ಕಾರವೂ ಮಾಡದೇ ಇರುವಂಥ ಹೀನಾಮಾನಂಥ ಕೆಲಸ ಇದು, ಹಿಂದೆ ಯಾರೂ ಮಾಡಿರುವುದಿಲ್ಲ. ಅಂಥಾ ಕೆಲಸವನ್ನು ಮಾಡಿದ್ದಾರೆ. ಹಿರಣ್ಣಯ್ಯ ಒಬ್ಬ ಕಲಾವಿದ. ಅವರಿಗೆ ಜಾಗವನ್ನು ಕೊಟ್ಟಿದ್ದರು. ೫ ವರ್ಷಗಳಲ್ಲಿ ಕಟ್ಟಡ ಆಗಿಲ್ಲ ಎಂದು ಜನವರಿ ೮ನೇ ತಾರೀಖು ೧೯೮೦ರಲ್ಲಿ ಕ್ಯಾನ್ಸಲ್‌ಮಾಡಿ ಅದೇ ದಿನ ಮಧ್ಯಾಹ್ನ ಒಂದು ಟ್ರಸ್ಟ್‌ಮಾಡಿ, ಆ ಟ್ರಸ್ಟ್‌ಗೆ ಕೊಟ್ಟಿದ್ದಾರೆ. ಆ ಟ್ರಸ್ಟ್‌ನಲ್ಲಿ ಯಾರ್ಯಾರು ಇದ್ದಾರೆ ಎಂಬ ಹೆಸರುಗಳನ್ನು ಆಮೇಲೆ ಹೇಳುತ್ತೇನೆ ಮಾನ್ಯ ಹಾರ್ನಹಳ್ಳಿ ರಾಮಸ್ವಾಮಿಯವರೂ ಒಬ್ಬ ಟ್ರಸ್ಟ್ ಮೆಂಬರ್. ಅವರು ಇಲ್ಲೇ ಕುಳಿತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಅವರು ನಿಮ್ಮ ಜೊತೆಯಲ್ಲಿ ಬಂದ ಮೇಲೆ ಭಾಗಾಂಶಕ್ಕಾಗಿ ಜಿಜ್ಞಾಸೆ ಬಂದಿದೆಯೋ.

ಶ್ರೀ ಆರ್. ಗುಂಡೂರಾವ್.—ಒಂದು ಟ್ರಸ್ಟ್‌ಮಾಡಿ, ಜಾಗವನ್ನು ಅದಕ್ಕೆ ಕೊಟ್ಟಿದ್ದಾರೆ, ಇದು ಕರ್ನಾಟಕದ ಜನತೆಯ ಮುಂದೆ ಇರುವಂಥಾದ್ದು, ಇದನ್ನು ಒಂದು ಹೇಳಿದರೆ ಸಾಕು. ಈ ಜಾಗವನ್ನು ೫೦ ವರ್ಷಗಳಿಗೆ ಕೊಟ್ಟಿದ್ದಾರೆ. ಮುಂದುಗಡೆ ರೈಲ್ವೆ ಸ್ಟೇಷನ್, ಹಿಂದೆ ಬಸ್ ಸ್ಟ್ಯಾಂಡ್ ಇರತಕ್ಕ, ಒಂದು ಎಕರೆ, ೨೫ ಗುಂಟೆ ಇರತಕ್ಕ ಜಾಗವನ್ನು ೬೦೦ ರೂಪಾಯಿ ಬಾಡಿಗೆಗೆ ಕೊಟ್ಟಿದ್ದಾರೆ, ಕುರುಡರ ಕೆಲಸ ಅಂತ ನನಗೆ ಹೇಳುತ್ತಾರೆ, ಇವರೇ ಮಾಡಿರುವುದು. ಕರ್ನಾಟಕದ ಜನತೆ ಕುರುಡರೇ.

ಶ್ರೀ ಎಚ್. ಡಿ. ದೇವೇಗೌಡ.—ಹಿಂದೆ ಮಾನ್ಯ ಹನುಮಂತಯ್ಯನವರಿದ್ದರು.

ಶ್ರೀ ಆರ್. ಗುಂಡೂರಾವ್.—ಮಾನ್ಯ ಹನುಮಂತಯ್ಯನವರಿಗೂ ಮೋಸಮಾಡಿದ್ದಾರೆ. ಅವರು ಹೆಸರು ಏತಕ್ಕೆ. ಅವರು ಕೇಳಿದ್ದಕ್ಕೆ ಹೇಳಿದೆ. ಇವತ್ತು ದೇಶದಲ್ಲಿ ಜನ ತೀರ್ಮಾನ ಮಾಡಿ ಬಿಡುತ್ತಾರೆ. ಮಾನ್ಯ ಮೈಕೇಲ್ ಫರ್ನಾಂಡೀಸ್ ಅವರು ಹೇಳಿದರು. What more crime do you want in this country? Do you need any evidence or witness

for this ? In the Bangalore City, Sir, 1 acre and 25 guntas of land in the heart of the city, in the centre of city, it is not for the public purpose, it is not for the cultural purpose, it is not for the sports purpose, it is not for park or any other interest, it is only for the selfinterest this land was grabbed.

ಶ್ರೀ ಎಂ. ಬಿ. ತಿಪ್ಪೇರುದ್ರಪ್ಪ.—ಆದು ಕೊಟ್ಟಿರುವುದು ಆವರು ರಾಜಿನಾಮೆ ಕೊಟ್ಟ ಹಿಂದಿನ ತಾರೀಖು ಎಂದು ಕಾಣಿಸುತ್ತದೆ.

ಆರ್. ಗುಂಡೂರಾವ್.—ಇದನ್ನು ಇವತ್ತಿನ ದಿವಸ ತಿಳಿದುಕೊಳ್ಳಬೇಕು. ಯಾರು ೬೦೦ ರೂಪಾಯಿಗಳಿಗೆ ಆ ಜಾಗವನ್ನು ಕೊಡುತ್ತಾರೆ ? ಜನಗಳ ಮುಂದೆ ಆವರು ಬರಲಿ ನಾನು ಹೇಳುತ್ತೇನೆ. ಆದು ಬರೀ ೪ ಜನರ ಹೆಸರಿನಲ್ಲಿದೆ. ಇನ್ನು ಬೇರೆ ಯಾರ ಹೆಸರಿನಲ್ಲಿಯೂ ಇಲ್ಲ. ಆ ೪ ಜನರಲ್ಲಿ ಶ್ರೀ ಹಾರನ ಹಳ್ಳಿ ರಾಮಸ್ವಾಮಿಯವರೂ ಇದ್ದಾರೆ. ಪಾಪ ಅವರಿಗೆ ಗೊತ್ತಿಲ್ಲ ಇದು, ಸಹಿ ಹಾಕ್ರಿ, ಹಾಕ್ರಿ ಅಂತ ಹೇಳಿ ಬಿಟ್ಟು ಹಾಕಿಸಿಕೊಂಡಿದ್ದಾರೆ.

ಶ್ರೀ ಬಿ. ಮೈಕಲ್ ಫರ್ನಾಂಡೀಸ್.—ಇಂಥಾ ಜಾಗವನ್ನು ಕಾಂಗ್ರೆಸ್ (ಐ) ನವರು ಹೇಗೆ ನಿಮ್ಮದೇ ಎಂದು ಕ್ಲೈಮ್ ಮಾಡುವುದು?

ಶ್ರೀ ಆರ್. ಗುಂಡೂರಾವ್.-ಜಾಗದ ಪ್ರಶ್ನೆ ಬೇರೆ. ಆದು ಈಗಾಗಲೇ ಕೋರ್ಟಿನ ಮುಂದಿದೆ. ಆದು ಕಾಂಗ್ರೆಸ್ (ಐ) ನೋ ಇಲ್ಲ ಕಾಂಗ್ರೆಸ್ (ಎಫ್) ದೋ ಅಥವಾ ಕಾಂಗ್ರೆಸ್ (ಎಸ್) ದೋ ಅಥವಾ ಇನ್ನೊಂದು ಪಾರ್ಟಿದೋ ಯಾವುದೇ ಆಗಿರಲಿ. ನಾವು ಅಧಿಕಾರಕ್ಕೆ ಬಂದ ತಕ್ಷಣವೇ ಅದನ್ನು ಕ್ಯಾನ್ಸಲ್ ಮಾಡಿದ್ದೇವೆ.

ಶ್ರೀ ಹಾರನ ಹಳ್ಳಿ ರಾಮಸ್ವಾಮಿ.—ಆ ಟ್ರಸ್ಟಿಗೆ ೫ ಜನ ೫ ಜನರ ಹೆಸರಿನಲ್ಲಿ ೪ ಜನರಿಂದ ಈಗಾಗಲೇ ರಾಜೀನಾಮೆ ಬರೆಸಿಕೊಂಡಿದ್ದಾರೆ. ಈಗಿರತಕ್ಕಂಥವರು ಒಬ್ಬರೇ...

SRI A. LAKSHMISAGAR,—Sir, under the law the trust,is still valid.

SRI S. R. BOMMAI.—There is a saying in English, 'That Committee is the best committee which consist of two persons, of whi h one is always absent.

ಶ್ರೀ ಹಾರನ ಹಳ್ಳಿ ರಾಮಸ್ವಾಮಿ. — ಆ ಟ್ರಸ್ಟಿನಲ್ಲಿರತಕ್ಕಂಥವರು ಒಬ್ಬರೇ ಇದ್ದಾರೆ.

ಶ್ರೀ ಆರ್. ಗುಂಡೂರಾವ್.—ಆದುದರಿಂದ ಈ ತರಹವೆಲ್ಲಾ ಜಾಗವನ್ನು ಅಲ್ಲಿ ಕೊಟ್ಟಿದ್ದರು, ಆ ವಿಷಯದ ಬಗ್ಗೆ ಹೇಳಿದ್ದೇನೆ. ಮತ್ತೆ ಈ ವಿಷಯದ ಬಗ್ಗೆ ನಾನು ಈಗಾಗಲೇ ಭರವಸೆ ಕೊಟ್ಟಿದ್ದೇನೆ, ಯಾರೇ ತಪ್ಪಿತಸ್ಥರಿರಲಿ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆಂದು ಹೇಳಿದ್ದೇನೆ. ಅಲ್ಲಿ ಜನರಲ್ ಬಾಡಿ ವೋಟಿಂಗ್ ನಡೆಯುವುದಕ್ಕೆ ಯಾರು ಅವಕಾಶ ಕೊಟ್ಟಿದ್ದರು ? ಏನು ಎನ್ನುವ ಸಮಸ್ಯೆ ಇದೆ ಆದು ಕಾಂಗ್ರೆಸ್ (ಯು) ನವರೋ ಕಾಂಗ್ರೆಸ್ (ಆರ್) ನವರೋ ಯಾರು ಪರವಾನಿಗೆಯನ್ನು ಕೊಟ್ಟಿದ್ದರು ಎನ್ನುವ ಪ್ರಶ್ನೆ ಇದೆ. ಮತ್ತೆ ಅಲ್ಲಿ ಶಾಂತಿಯನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಬೆಂಗಳೂರಿನಲ್ಲಿ ಅಂಥಾ ಜಾಗವನ್ನು ಕೊಟ್ಟಿದ್ದು ಸರಿಯೋ ತಪ್ಪೋ ಎನ್ನುವುದನ್ನು ಜನತೆಯೇ ತೀರ್ಮಾನ ಮಾಡಲಿ, ಜನತೆ ಎನು ತೀರ್ಮಾನ ಕೊಡುತ್ತದೆಯೋ ಅದಕ್ಕೆ ನಾವು ತಲೆ ಬಾಗೋಣ, ತಪ್ಪಿತಸ್ಥರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ ಮತ್ತು ಅಲ್ಲಿ ಶಾಂತ ನೆಲೆಸುವುದಕ್ಕೆ ತುರ್ತು ಏನು ಆಗಿ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಕಾನೂನು ಪ್ರಕಾರ ವಾಗಿ ಮ್ಯಾಜಿಸ್ಟ್ರೇಟರವರ ಕಂಟ್ರೋಲ್ ನಲ್ಲಿದೆ. ಇಷ್ಟೇ ಅಧ್ಯಕ್ಷರೇ, ಮತ್ತೆ ಇದಕ್ಕಿಂತ ಇನ್ನು ಏನು ಹೇಳಲಿ ?...